(ಅನುಬಂಧ–I

3. <u>ಸಹಕಾರ ಸಚಿವರ ಹೇಳಿಕೆ</u>

ವಿಷಯ: ಗುಲ್ಬರ್ಗಾ ಹಾಲು ಒಕ್ಕೂಟವನ್ನು ಸೂಪರ್‌ಸೀಡ್ ಮಾಡಿರುವ ಬಗ್ಗೆ.

ಅಧ್ಯಕ್ಷರು: ನಿನ್ನೆ ಶೂನ್ಯ ವೇಳೆಯಲ್ಲಿ ಪ್ರಸ್ತಾಪವಾದ ವಿಷಯದ ಬಗ್ಗೆ ಮಾನ್ಯ ಸಹಕಾರ ಸಚಿವರು ಉತ್ತರ ಕೊಡುತ್ತಾರೆ.

ಶ್ರೀ ಲಕ್ಷ್ಮಣ್ ಸಂಗಪ್ಪ ಸವದಿ (ಸಹಕಾರ ಸಚಿವರು): ಸನ್ಮಾನ್ಯ ಅಧ್ಯಕ್ಷರೆ, ನಿನ್ನೆ ಸನ್ಮಾನ್ಯ ಹೆಚ್.ಡಿ.ರೇವಣ್ಣನವರು ಶೂನ್ಯ ವೇಳೆ ಸಂದರ್ಭದಲ್ಲಿ ಒಂದು ವಿಷಯವನ್ನು ಪ್ರಸ್ತಾಪ ಮಾಡಿದ್ದರು. ಗುಲ್ಬರ್ಗಾದಲ್ಲಿ ಇರತಕ್ಕಂಥ ಹಾಲು ಒಕ್ಕೂಟವನ್ನು ಅಲ್ಲಿಯ ಅಧಿಕಾರಿಗಳು ಸೂಪರ್‌ಸೀಡ್ ಮಾಡಿರುವ ಬಗ್ಗೆ ನಮ್ಮ ಗಮನವನ್ನು ಸೆಳೆದಿದ್ದರು. ನಿನ್ನೆ ನನಗೆ ಮಾಹಿತಿ ಇರಲಿಲ್ಲ. ಇವೊತ್ತು ಸಂಬಂಧಪಟ್ಟಂಥ ಅಧಿಕಾರಿಗಳ ಜೊತೆಯಲ್ಲಿ ಸಮಾಲೋಚನೆ ಮಾಡಿಕೊಂಡು ಮಾಹಿತಿಯನ್ನು ಪಡೆದುಕೊಂಡು ವಿವರವನ್ನು ತಮ್ಮ ಮುಖಾಂತರ ಸನ್ಮಾನ್ಯ ಸದಸ್ಯರಿಗೆ ಇವೊತ್ತು ನಾನು ಒದಗಿಸುತ್ತೇನೆ. ಮಾಹಿತಿ ಈ ರೀತಿ ಇದೆ. ದಿನಾಂಕ 10–04–2008ರಂದು ನಡೆದ ಒಕ್ಕೂಟದ ಆಡಳಿತ ಮಂಡಳಿಯ ಸಭೆಯು ವಿಷಯ ಸಂಖ್ಯೆ 6ರಲ್ಲಿ ಗುಲ್ಬರ್ಗಾ ಹಾಲು ಒಕ್ಕೂಟ ತನ್ನ ಕೇಂದ್ರ ಸ್ಥಾನವನ್ನು ಗುಲ್ಬರ್ಗಾದಿಂದ ಬೀದರ್ ಪುಟ್ಟಣಕ್ಕೆ ವರ್ಗಾಯಿಸಲು ತೀರ್ಮಾನಿಸಿರುತ್ತದೆ. ಸದರಿ ಪ್ರಸ್ತಾವನೆಯನ್ನು ಗುಲ್ಬರ್ಗಾ ಪ್ರಾಂತ್ಯದ ಜಂಟಿ ನಿಬಂಧಕರು ದಿನಾಂಕ 19–11–2008ರಲ್ಲಿ ಮಾನ್ಯ ಸಹಕಾರಿ ಸಂಘಗಳ ನಿಬಂಧಕರಿಗೆ ಸಲ್ಲಿಸಿರುತ್ತಾರೆ. ಮಾನ್ಯ ಸಹಕಾರಿ ಸಂಘಗಳ ನಿಬಂಧಕರು ಸದರಿ ಪ್ರಸ್ತಾವನೆಯನ್ನು ಪರಿಶೀಲಿಸಿ ಒಕ್ಕೂಟದ ಸ್ಥಿರಾಸ್ತಿ ಸುಮಾರು 60 ಸಾವಿರ ಲೀಟರ್ ಸಾಮರ್ಥ್ಯದ ಮಿಲ್ಕ್ ಪ್ಲಾಂಟ್, ಸಿಬ್ಬಂದಿ, ಸಿಬ್ಬಂದಿಯ ನಿವಾಸಗಳು, ತರಬೇತಿ ಕೇಂದ್ರ, ಕಛೇರಿ ಕಟ್ಟಡಗಳು, ಉಗ್ರಾಣಗಳು ಮತ್ತು ಶಹಾಪುರದಲ್ಲಿ ಸುಮಾರು 160 ಎಕರೆ ಜಮೀನಿನಲ್ಲಿರುವ ಪ್ಲಾಂಟ್ ಮತ್ತು ಫಾರಂಗಳಲ್ಲಿ ....(ಗೊಂದಲ)

ಅಧ್ಯಕ್ಷರು: ಅವರು ಮೊದಲು ಉತ್ತರ complete ಮಾಡಲಿ. ಸುಮ್ಮನೆ ಕುಳಿತುಕೊಳ್ಳಿ.

(ಗೊಂದಲ)

ಶ್ರೀ ಹೆಚ್.ಸಿ.ಬಾಲಕೃಷ್ಣ: ಉತ್ತರದ ಕಾಪಿಯನ್ನು ನಮಗೆ ಒದಗಿಸಿ. ನಾವು ಕಾಪಿ ಕೊಟ್ಟರೆ ನಾವು ಓದಿಕೊಳ್ಳುತ್ತೇವೆ.

ಶ್ರೀ ಲಕ್ಷ್ಮಣ್ ಸಂಗಪ್ಪ ಸವದಿ: ಉತ್ತರದ ಕಾಪಿಯನ್ನು ಕೊಡುತ್ತೇನೆ ಸ್ವಾಮಿ.

ಅಧ್ಯಕ್ಷರು: ಒಂದು ಉತ್ತರದ ಕಾಪಿ ಇದ್ದರೆ ಅವರಿಗೆ ಕೊಡಿ.

ಶ್ರೀ ಹೆಚ್.ಸಿ.ಬಾಲಕೃಷ್ಣ: ಸರಿ ಸ್ವಾಮಿ. ನಮಗೂ ಅದನ್ನು ಕೊಡಿಸಿ. ನಾವು ನೋಡುತ್ತೇವೆ.

ಶ್ರೀ ಲಕ್ಷ್ಮಣ್ ಸಂಗಪ್ಪ ಸವದಿ (ಸಹಕಾರ ಸಚಿವರು): 160 ಎಕರೆ ಜಮೀನಿನಲ್ಲಿರುವ ಪ್ಲಾಂಟ್ ಮತ್ತು ಫಾರ್ಮ್ ಅಲ್ಲದೇ, ಶಹಾಪುರದಲ್ಲಿ 500 ಲೀಟರ್ ಸಾಮರ್ಥ್ಯದ 8 ಬಿ.ಎಂ.ಸಿ ಇರುವುದನ್ನು ಗಮನಿಸಿ, ಗುಲ್ಬರ್ಗಾ ಸಹಕಾರಿ ಹಾಲು ಉತ್ಪಾದಕರ ಸಹಕಾರಿ ಸಂಘಗಳ ಒಕ್ಕೂಟದ ಅಧ್ಯಕ್ಷರು ಹಾಗೂ ಮಹಿಳಾ ಹಾಲು ಉತ್ಪಾದಕರ ಸಹಕಾರಿ ಸಂಘಗಳ ಅಧ್ಯಕ್ಷರು, ಗುಲ್ಬರ್ಗಾ ಸಹಕಾರಿ ಸಂಘಗಳು ಹಾಲು ಒಕ್ಕೂಟದ ಕೇಂದ್ರ ಕಛೇರಿಗಳಿಗೆ ಬೀದರ್‌ಗೆ ವರ್ಗಾಯಿಸುವುದು ವಿರೋಧಿಸಿರುವುದು ಹಿನ್ನಲೆಯಲ್ಲಿ ಪ್ರಸ್ತಾವಿಸಲಾಗಿದೆ. ಪ್ರಸ್ತಾವನೆಯನ್ನು ತಿರಸ್ಕರಿಸುತ್ತಾ, ಯಾವುದೇ ಕಾರಣಕ್ಕೂ ಒಕ್ಕೂಟದ ಕೇಂದ್ರ ಸ್ಥಾನವನ್ನು ಗುಲ್ಬರ್ಗಾದಿಂದ ಬೀದರ್ ಪಟ್ಟಣಕ್ಕೆ ವರ್ಗಾಯಿಸಬಾರದು ಎಂದು ದಿನಾಂಕ 3.1.2009ರಂದು ಸದರಿ ಹಾಲು ಒಕ್ಕೂಟದ ವ್ಯವಸ್ಥಾಪಕ ನಿರ್ದೇಶಕರಿಗೆ ಪತ್ರ ಮುಖೇನ ಸೂಚಿಸಿರುತ್ತಾರೆ. ವಿಷಯ, ಸ್ಥಿತಿ ಹೀಗಿದ್ದರೂ ಹಾಲು ಒಕ್ಕೂಟದ ಆಡಳಿತ ಮಂಡಳಿಯವರು ದಿನಾಂಕ 29.4.2009ರಂದು ವಿಷಯ ಸಂಖ್ಯೆ 7ರಲ್ಲಿ ಇದೇ ವಿಷಯದಲ್ಲಿ ಒಕ್ಕೂಟದ ಕೇಂದ್ರ ಸ್ಥಾನವನ್ನು ಬೀದರ್ ಪಟ್ಟಣಕ್ಕೆ ಸ್ಥಳಾಂತರಿಸುವ ಬಗ್ಗೆ ಮಾನ್ಯ ಮಾಡಲು ಸಹಕಾರಿ ಸಂಘಗಳ ನಿಬಂಧಕರಿಗೆ ಕಾರ್ಯನಿರ್ದೇಶಕರು ಪತ್ರ ಬರೆಯುವಂತೆ ಸೂಚಿಸಿರುವುದಲ್ಲದೇ, ಕಾರ್ಯನಿರ್ವಾಹಕ ನಿರ್ದೇಶಕರು ಖುದ್ದಾಗಿ ಸಹಕಾರಿ ಸಂಘಗಳು ನಿಬಂಧಕರುಗಳನ್ನು ಭೇಟಿ ಮಾಡಿ, ಮನವರಿಕೆ ಮಾಡಲು ಸೂಚಿಸಿರುತ್ತಾರೆ. ಈ ಸಂಬಂಧ ಮಾನ್ಯ ನಿಬಂಧಕರು ದಿನಾಂಕ 30.6.2009ರಂದು ಪತ್ರವನ್ನು ಒಕ್ಕೂಟದ ಕಾರ್ಯ ನಿರ್ವಾಹಕರಿಗೆ ವಿಳಾಸಿಸಿ, ನಿಮ್ಮ ಒಕ್ಕೂಟದ ಉಪನಿಯಮಗಳಂತೆ ನೋಂದಾಯಿಸಿರುವ ಕೇಂದ್ರ ಕಛೇರಿ ಬೇರೆ ಜಿಲ್ಲೆಗೆ ವರ್ಗಾಯಿಸಲು ಅವಕಾಶ ಇರುವುದಿಲ್ಲ. ಇಂತಹ ವಿಷಯವನ್ನು ವಾರ್ಷಿಕ ಮಹಾಸಭೆಯಲ್ಲಿ ಮಂಡಿಸಿ, ಉಪನಿಯಮಗಳಿಗೆ ತಿದ್ದುಪಡಿ ತಂದು ಅನುಮೋದನೆಯನ್ನು ಪಡೆದ ಹೊರತು ಕೇಂದ್ರ ಸ್ಥಾನವನ್ನು ಬೇರೆ ಜಿಲ್ಲೆಗೆ ವರ್ಗಾಯಿಸಲು ಸಾಧ್ಯವಿಲ್ಲವೆಂದು ತಿಳಿಸಿರುತ್ತಾರೆ. ಮೇಲ್ಕಂಡ ಕ್ರಮಗಳಿಗೆ ಸಹಕಾರಿ ಸಂಘಗಳು ಜಂಟಿ ನಿಬಂಧಕರು ಗುಲ್ಬರ್ಗಾ, ಇವರು ಒಕ್ಕೂಟದ ಅಧ್ಯಕ್ಷರಿಗೆ ದಿನಾಂಕ 28.4.2009ರಂದು ಪತ್ರ ಬರೆದು ಅವರ ಕಛೇರಿಯಿಮದ ಹಾಗೂ ಸಹಕಾರಿ ಸಂಘಗಳ ನಿಬಂಧಕರ ಕಛೇರಿಯಿಂದ ನೀಡಿದ ನಿರ್ದೇಶನಗಳನ್ನು ಪಾಲಿಸದೇ ಇಲಾಖೆಯ ಅನುಮತಿ ಪಡೆದುಕೊಳ್ಳಲು ತಿಳುವಳಿಕೆ ನೀಡಿರುವುದನ್ನು ವ್ಯತಿರಿಕ್ತವಾಗಿ ಬಿಂಬಿಸಿ, ಟಿಪ್ಪಣಿಯನ್ನು ಮಂಡಿಸುವ ಬಗ್ಗೆ ಆಕ್ಷೇಪಿಸಿ, ಇನ್ನಾದರೂ ಇಲಾಖೆಯ ಅನುಮತಿ ಪಡೆದುಕೊಳ್ಳುವಂತೆ, ಇಲ್ಲವಾದಲ್ಲಿ ಕಾನೂನಿನಂತೆ ಕ್ರಮ ವಿದಿಸುವುದಾಗಿ ತಿಳಿಸಲಾಗಿರುತ್ತದೆ. ವಿಷಯ, ಸ್ಥಿತಿ ಹೀಗಿದ್ದರೂ ಸಹಾ ಒಕ್ಕೂಟದ ಆಡಳಿತ ಮಂಡಳಿಯವರು ದಿನಾಂಕ 20.6.2009ರಂದು ಸಭೆ ಸೇರಿ ವಿಷಯ ಸಂಖ್ಯೆ 2ರಲ್ಲಿ ಚರ್ಚಿಸಿ, ಒಕ್ಕೂಟದ ಹಾಲು ಶೇಖರಣೆ ಮತ್ತು ತಾಂತ್ರಿಕ ಚಟುವಟಿಕೆಗಳನ್ನು ಬೀದರ್ ಪಟ್ಟಣದಲ್ಲಿ ನಿರ್ವಹಿಸಲು ಮತ್ತು ಹಾಲು ಒಕ್ಕೂಟದ ಆಡಳಿತ ಮಂಡಳಿಯ ಸಭೆ

ಮತ್ತು ಇನ್ನಿತರ ಸಭೆಗಳನ್ನು ಗುಲ್ಬರ್ಗಾ ಕೇಂದ್ರ ಸ್ಥಾನದಿಂದ ನಡೆಸಿಕೊಂಡು ಹೋಗಲು ತೀರ್ಮಾನಿಸಿರುತ್ತಾರೆ. ಒಕ್ಕೂಟದ ಆಡಳಿತ ಮಂಡಳಿಯ ಸದಸ್ಯರುಗಳು ಮೇಲ್ಕಂಡ ಕಾನೂನುಬಾಹಿರ ನಿರ್ಣಯ ತೆಗೆದುಕೊಂಡು ಮಾನ್ಯ ಸಹಕಾರಿ ಸಂಘಗಳ ನಿಬಂಧಕರ ಸೂಚನೆ, ಗುಲ್ಬರ್ಗಾ ಪ್ರಾಂತ್ಯದ ಜಂಟಿ ನಿಬಂಧಕರ ನಿರ್ದೇಶನಗಳನ್ನು ಉಲ್ಲಂಘಿಸಿ ಎಲ್ಲಾ ಚಟುವಟಿಕೆಗಳನ್ನು ಬೀದರ್ ಪಟ್ಟಣದ ಬಾಡಿಗೆ ಕಟ್ಟಡದಲ್ಲಿ ನಿರ್ವಹಿಸಿರುವ ಬಗ್ಗೆ ಜಂಟಿ ನಿಬಂಧಕರು, ಗುಲ್ಬರ್ಗಾ ಪ್ರಾಂತ್ಯದವರು ಸದರಿ ಆಡಳಿತ ಮಂಡಳಿಯ ನಿರ್ದೇಶಕರುಗಳ ವಿರುದ್ಧ ಕರ್ನಾಟಕ ಸಹಕಾರಿ ಕಾಯ್ದೆ ಕಲಂ 29(ಸಿ) ಮತ್ತು 8(ಬಿ) ಅಡಿಯಲ್ಲಿ ಸದರಿ ವಿವರಣೆಯನ್ನು ನೀಡಲು ದಿನಾಂಕ 1.7.2009ರಂದು ನೋಟಿಸ್ ನೀಡಿ, ನೋಟಿಸ್ ಜಾರಿ ಮಾಡಿ 7 ದಿನದೊಳಗೆ ಉತ್ತರವನ್ನು ನೀಡಲು ಹಾಗೂ 9.7.2009ರ ಬೆಳಗ್ಗೆ 11 ಗಂಟೆಗೆ ಜಂಟಿ ನಿಬಂಧಕರ ಕಛೇರಿಯಲಿ ಹಾಜರಾಗಿ ಲಿಖಿತ ಉತ್ತರವನ್ನು ಸಲ್ಲಿಸುವಂತೆ ತಿಳಿಸಲಾಗಿದೆ. ಸದರಿ ನೋಟಿಸ್‌ಗೆ ಒಕ್ಕೂಟದ ಅಧ್ಯಕ್ಷರು ಮಾತ್ರ ತಮ್ಮ ಲಿಖಿತ ಹೇಳಿಕೆಯನ್ನು ಫ್ಯಾಕ್ಸ್ ಮೂಲಕ ಸಲ್ಲಿಸಿದ್ದು, ಪೂರ್ಣ ವಿವರಣೆಯನ್ನು ಸಲ್ಲಿಸಲು ಕಾಲಾವಕಾಶವನ್ನು ಕೋರಿರುತ್ತಾರೆ. ಈ ವಿಷಯದ ಬಗ್ಗೆ ಕಳೆದ 8 ದಿನಗಳಿಂದ ಮಾನ್ಯ ನಿಬಂಧಕರು, ಜಂಟಿ ನಿಬಂಧಕರು ಗುಲ್ಬರ್ಗಾ ಪ್ರಾಂತ್ಯದವರು ಸ್ಪಷ್ಟ ನಿರ್ದೇಶನ ನೀಡಿದ್ದಾಗಿಯೂ ಸಹಾ ಒಕ್ಕೂಟದ ನಿರ್ದೇಶಕರು ಯಾವುದೇ ಸೂಕ್ತ ಕ್ರಮ ತೆಗೆದುಕೊಳ್ಳದೇ ಇರುವ ಹಿನ್ನೆಲೆಯಲ್ಲಿ ಒಟ್ಟು 9 ಜನ ಹಾಲಿ ಆಡಳಿತ ಮಂಡಳಿಯ ನಿರ್ದೇಶಕರನ್ನು ಸಹಕಾರಿ ಸಂಘಗಳ ಜಂಟಿ ನಿಬಂಧಕರು, ಗುಲ್ಬರ್ಗಾ ಪ್ರಾಂತ್ಯ ಇವರು ತಮಗೆ ದತ್ತವಾಗಿರುವ ಅಧಿಕಾರವನ್ನು ಚಲಾಯಿಸಿ ದಿನಾಂಕ 9.7.2009ರಂದು ಅಧ್ಯಕ್ಷರು, ನಿರ್ದೇಶಕರು 5 ವರ್ಷಗಳ ಕಾಲ ಸ್ಥಾನದಿಂದ ಅನರ್ಹಗೊಳಿಸಲು ಆದೇಶವನ್ನು ಹೊರಡಿಸಿರುತ್ತಾರೆ. ಪ್ರಾಂತೀಯ ಜಂಟಿ ನಿಬಂಧಕರು ಅವರಿಗೆ ದತ್ತವಾಗಿರುವ ಅಧಿಕಾರವನ್ನು ಚಲಾಯಿಸಿ ಹೊರಡಿಸಿರುವ ಆದೇಶದಿಂದ ಬಾಧಿತರಾದವರು ಕರ್ನಾಟಕ ಸಹಕಾರಿ ಸಂಘಗಳ ಕಾಯ್ದೆ 1959ರ ಕಲಂ 106 ರ ಅಡಿಯಲ್ಲಿ ಮೇಲಾಧಿಕಾರಿಗಳಿಗೆ ಮೇಲ್ಮನವಿಯನ್ನು ಸಲ್ಲಿಸಲು ಅವಕಾಶ ಇರುವುದು, ಈ ಮೂಲಕ ಸದನದ ಗಮನಕ್ಕೆ ತಾನು ತರಲು ಬಯಸುತ್ತೇನೆ.

ಅಧ್ಯಕ್ಷರು: ಈಗ ಅವರು ಉತ್ತರವನ್ನು ಕೊಟ್ಟಿದ್ದಾರೆ. ನೀವು ಶೂನ್ಯ ವೇಳೆಯಲ್ಲಿ ಪ್ರಸ್ತಾಪ ಮಾಡಿದ್ದೀರಿ ಅದಕ್ಕೆ ಅವರು ಉತ್ತರವನ್ನು ಕೊಟ್ಟಿದ್ದಾರೆ. ಇದರ ಬಗ್ಗೆ ಹೆಚ್ಚಿನ ಚರ್ಚೆ ಮಾಡಲು ನಾನು ಅವಕಾಶ ಕೊಡುವುದಿಲ್ಲ.

ಶ್ರೀ ಹೆಚ್.ಸಿ.ಬಾಲಕೃಷ್ಣ: ಹೆಚ್ಚು ಚರ್ಚೆ ಅವಶ್ಯಕತೆ ಅಲ್ಲ ಅಧ್ಯಕ್ಷರೆ, ನಾವು ಒಂದೆರಡು ಪ್ರಶ್ನೆಗಳನ್ನು ಕೇಳಬೇಕಲ್ಲವೇ?

ಅಧ್ಯಕ್ಷರು: ಒಂದು ಸ್ಪಷ್ಟೀಕರಣ ಕೇಳಿ ಮತ್ತು ಮೇಲ್ಮನವಿ ಸಲ್ಲಿಸಲು ಪ್ರಾವಿಷನ್ ಇದೆ ಎಂದು ಹೇಳಿದ್ದಾರೆ.

ಶ್ರೀ ಬಂಡೆಪ್ಪ ಕಾಶೆಂಪೂರ್: ಮಾನ್ಯ ಅಧ್ಯಕ್ಷರೆ, ಇವರು ಒಂದು ವರ್ಷದ ಪುರಾಣವನ್ನು ಹೇಳಿದ್ದಾರಲ್ಲಾ, ಅದು ಈ ದಿವಸಕ್ಕೇ ಏಕೆ ಬಂದು ನಿಂತಿದೆ? ಅದು ಎಲ್ಲಕ್ಕಿಂತ ಮುಖ್ಯ. 10ನೇ ತಾರೀಖಿಗೆ ಕೇಂದ್ರ ಕಛೇರಿಗೆ ಅಲ್ಲಿಂದ nominee ಯಾಗಿ ಬರುವ election ಗೆ ಸಬಂಧಿಸಿದಂತೆ pre-plan ಮಾಡಿ ಇವರು ಏನು ವಜಾಗೊಳಿಸಿದ್ದಾರೆ, ಅದರಲ್ಲಿ ಒಂದು ಹಾಕಿದ್ದಾರೆ ಏನೆಂದರೆ, "29(ಸಿ) ಅಡಿಯಲ್ಲಿ ಅನರ್ಹಗೊಳಿಸಲಾಗಿದೆ." ಇಷ್ಟೇ order ಮಾಡಬಹುದಾಗಿತ್ತು. ಅದರ ಮುಂದೆ "ದಿನಾಂಕ 10.7.2009ರಂದು ನಡೆಯುವ ಆಡಳಿತ ಮಂಡಳಿಯ ಸಭೆಗೆ ಸದರಿ ಸದಸ್ಯರು ಹಾಜರಾಗದಂತೆ ಕ್ರಮ ಕೈಗೊಳ್ಳುವಂತೆ ಸೂಚಿಸಲಾಗಿದೆ." ಅಂದರೆ, ಅವರು ಯಾರು ಇವರನ್ನು ಅನರ್ಹಗೊಳಿಸದ್ದಾರೋ ಅವರಿಗೆ ಹೇಗೆ ಗೊತ್ತಾಯಿತು? ಅವರು Joint Registrar. ಅವರು ಅನರ್ಹಗೊಳಿಸಬಹುದಾಗಿತ್ತು ಆದರೆ, 10ನೇ ತಾರೀಖು ನಡೆಯುವ ಸಭೆಯಲ್ಲಿ ಹಾಜರಾಗಬಾರದು ಎಂದು ಹೇಳಿದ್ದಾರೆ. ಇದರ ಹಿನ್ನೆಲೆಯಲ್ಲಿ 29(ಸಿ) ಅಡಿಯಲ್ಲಿ ಒಬ್ಬ ಸದಸ್ಯರನ್ನು ಅನರ್ಹಗೊಳಿಸಬಹುದು. ಆದರೆ, complete body ಏನಿದೆ ಅವರನ್ನು supersede ಮಾಡುವುದಕ್ಕೆ ಬರುವುದಿಲ್ಲ. ಅದನ್ನು ನಿಯಮ 30 ರ ಅಡಿಯಲ್ಲಿ ಮಾಡಬೇಕಾಗುತ್ತದೆ. ಇವತ್ತು ಉದ್ದೇಶ ಪೂರ್ವಕವಾಗಿ, ಚುನಾವಣೆ ಇದೆ ಎನ್ನುವ ಕಾರಣಕ್ಕಾಗಿ, ನಮಗೆ nominee ಬರುವುದಿಲ್ಲ, ಅದು opposition ನಲ್ಲಿ ಹೋಗುತ್ತದೆ ಎಂಬ ನಿಟ್ಟಿನಲ್ಲಿ ಇವೊತ್ತು ಅವರೆಲ್ಲರೂ ಸೇರಿ, ಅವರು ಅಧಿಕಾರ ದುರುಪಯೋಗ ಮಾಡಿಕೊಂಡು ಈ ಕೆಲಸ ಮಾಡಿದ್ದಾರೆ ಎಂದು ಹೇಳುವುದಕ್ಕೆ ಬಯಸುತ್ತೇನೆ. ಆದ್ದರಿಂದ ತಕ್ಷಣ ತಾವು ಆ ಆದೇಶವನ್ನು ವಾಪಸ್ಸು ತೆಗೆದುಕೊಳ್ಳಬೇಕು. ಏಕೆಂದರೆ ಅವರೆಲ್ಲಾ ಚುನಾಯಿತ ಪ್ರತಿನಿಧಿಗಳು. ಅವರಿಗೆ ಒಂದೂ ಅವಕಾಶವನ್ನು ಕೊಟ್ಟಿಲ್ಲ. 6ನೇ ತಾರೀಖಿಗೆ ಹೋಗಿ ಮನೆ ಬಾಗಿಲಿಗೆ ನೋಟಿಸ್ ಅನ್ನು ಅಂಟಿಸಿ, 8ನೇ ತಾರೀಖಿಗೆ ಅವರು ಅನರ್ಹಗೊಳಿಸುತ್ತಾರೆ. ಈ ರೀತಿ ಸರ್ಕಾರ ದುರುಪಯೋಗಪಡಿಸುತ್ತಿದೆ. ಅದಕ್ಕಾಗಿ ತಕ್ಷಣವೇ ಆದೇಶವನ್ನು ವಾಪಸ್ಸು ತೆಗೆದುಕೊಳ್ಳಬೇಕು. Joint Registrar ಅವರನ್ನು ಸಸ್ಪೆಂಡ್ ಮಾಡಬೇಕೆಂದು ಈ ಮುಖಾಂತರ ಕೇಳುತ್ತೇನೆ.

ಶ್ರೀ ಹೆಚ್.ಸಿ.ಬಾಲಕೃಷ್ಣ: ಮಾನ್ಯ ಅಧ್ಯಕ್ಷರೆ, ಇದರ ಉದ್ದೇಶವೇನಿದೆ ಎಂದು ಈಗಾಗಲೇ ಮಾನ್ಯ ಬಂಡೆಪ್ಪ ಕಾಶೆಂಪೂರ್ ಅವರು ತಿಳಿಸಿದ್ದಾರೆ. ಡೈರಿ ಎಲೆಕ್ಷನ್‌ಗೆ ಸರ್ಕಾರದ ವಿರುದ್ಧವಾಗಿ ಒಂದು ವೋಟ್ ಹೋಗುತ್ತದೆ ಎನ್ನುವ ಕಾರಣ ಕೊಟ್ಟು ಇವೊತ್ತು supersede ಮಾಡಿರುವಂಥಾದ್ದು. ಒಂದು ಏನು ಹೇಳಿದ್ದಾರೆಂದರೆ, ಗುಲ್ಬರ್ಗಾದಲ್ಲಿ ನಡೆಯುತ್ತಿರುವ ಕಛೇರಿಯನ್ನು ಬೀದರ್‌ಗೆ ಸ್ಥಳಾಂತರ ಮಾಡಿ ಒಕ್ಕೂಟದ ಎಲ್ಲಾ ಚಟುವಟಿಕೆಗಳನ್ನು ಬೀದರ್‌ನಲ್ಲಿ ನಡೆಸಬೇಕೆಂದು ತೀರ್ಮಾನ

ಮಾಡಿದ್ದಾರೆಂದು ಹೇಳಿದ್ದಾರೆ. ನಾನು ನಿಮ್ಮ ಮೂಲಕ ಒಂದು ಪ್ರಶ್ನೆಯನ್ನು ಹಾಕುತ್ತೇನೆ. ಇದುವರೆಗೂ ಬೀದರ್‌ನಲ್ಲಿ ಯಾವುದಾದರೂ ಮೀಟಿಂಗ್ ಮಾಡಿದ್ದಾರಾ? ನಾಳೆ ನಡೆತಕ್ಕಂಥ ಸಭೆ ಕೂಡ ಗುಲ್ಬರ್ಗಾದಲ್ಲಿ ಮಾಡುತ್ತೇವೆಂದು ನೋಟಿಸ್ ಕೊಟ್ಟಿದ್ದಾರೆ. ಇದುವರೆಗೂ ಬೀದರ್‌ನಲ್ಲಿ ಒಂದು ಮೀಟಿಂಗ್ ಕೂಡ ಆಗಿಲ್ಲ. ನಿಮ್ಮ Joint Registrar ಅವರು ಬೀದರ್‌ನಲ್ಲಿ ಒಂದೂ ಮೀಟಿಂಗ್ ನಡೆಯುತ್ತದೆ ಎಂದು ಯಾವ ರೀತಿಯ ವರದಿಯನ್ನು ಕೊಟ್ಟರು? 29(ಸಿ) ಅಡಿಯಲ್ಲಿ ಯಾರೋ ಒಬ್ಬರು ಇಬ್ಬರನ್ನು ಅನರ್ಹಗೊಳಿಸಬಹುದು, entire committee ಅನ್ನು ಅನರ್ಹಗೊಳಿಸಲು ಸಾಧ್ಯವಿಲ್ಲ. ಇದು ರಾಜಕೀಯ ಉದ್ದೇಶದಿಂದ ಕೂಡಿರುವುದರಿಂದ ದಯಮಾಡಿ ತಕ್ಷಣವೇ ಇದನ್ನು ರದ್ದುಪಡಿಸಬೇಕು. ವಾಪಸ್ಸು ಆ bodyಯನ್ನು reinstate ಮಾಡಬೇಕು. ಅದಕ್ಕೆ ಅವಕಾಶ ಮಾಡಿಕೊಡಬೇಕು. ತಪ್ಪು ವರದಿಯನ್ನು ಕೊಟ್ಟಿರುವಂಥ ಅಧಿಕಾರಿಯ ಮೇಲೆ ನೀವು ಕ್ರಮವನ್ನು ತೆಗೆದುಕೊಳ್ಳಬೇಕು. ದಯಮಾಡಿ ತಮ್ಮ ಮುಖಾಂತರ ಉತ್ತರವನ್ನು ಬಯಸುತ್ತೇನೆ, ಅಧ್ಯಕ್ಷರೆ.

(ಗೊಂದಲ)

ಅಧ್ಯಕ್ಷರು: ಮಾನ್ಯ ಶಿವಲಿಂಗೇಗೌಡರೇ, ಈಗಾಗಲೇ ಇಬ್ಬರು ಮಾನ್ಯ ಸದಸ್ಯರು ಸಾಕಷ್ಟು ಹೇಳಿದ್ದಾರೆ. ಇದು general subject ಅಲ್ಲ. ಗುಲ್ಬರ್ಗಾ, ಬೀದರ್‌ಗೆ ಸಂಬಂಧವಿದೆ ಎಂದು ಹೇಳಿದ್ದೀರಿ. ಈಗ ಎಲ್ಲರೂ ಅದರ ಮೇಲೆ ಮಾತನಾಡುವಾಗ ನಾನು ಶೂನ್ಯ ವೇಳೆಯಲ್ಲಿ ಏಕೆ ಅವಕಾಶ ಮಾಡಿಕೊಡಬೇಕು?

ಶ್ರೀ ಕೆ.ಎಂ.ಶಿವಲಿಂಗೇಗೌಡ: ಇದು ಗುಲ್ಬರ್ಗಾ ಪ್ರಶ್ನೆ ಅಲ್ಲ.

ಅಧ್ಯಕರು: ಇದು ಗುಲ್ಬರ್ಗಾಕ್ಕೆ ಸಂಬಂಧಪಟ್ಟಿದ್ದು. ನೀವು general ಆಗಿ ಮಾತನಾಡುವುದಕ್ಕೆ ಬರುವುದಿಲ್ಲ.

ಶ್ರೀ ಕೆ.ಎಂ.ಶಿವಲಿಂಗೇಗೌಡ: ಇಲ್ಲಿರುವಂಥಾದ್ದು ರಾಜಕೀಯ ದುರುದ್ದೇಶ. ಮಾನ್ಯ ರೇವಣ್ಣನವರು ಅಧ್ಯಕ್ಷರಾಗಿ ಬರುತ್ತಾರೆಂದು ಕಂಟ್ರೋಲ್ ಮಾಡುವುದಕ್ಕೆ ದುರುದ್ದೇಶಪೀಡಿತರಾಗಿ ಮಾಡುತ್ತೀರುವ ಪಿತೂರಿ ಇದಾಗಿದೆ. ಈ ಮಧ್ಯದಲ್ಲಿ ಪ್ರಜಾತಂತ್ರ ವ್ಯವಸ್ಥೆಯೊಳಗಡೆ ಇದ್ದು ಒಂದು elected bodyಯನ್ನು ಯಾವ ರೀತಿಯಾಗಿ ಕೊಲೆ ಮಾಡತಕ್ಕ ರೀತಿಯಲ್ಲಿ ರದ್ದು ಮಾಡಿದ್ದಾರೆ ಎನ್ನುವ ಬಗ್ಗೆ ಇಡೀ ಸದನ ಯೋಚನೆ ಮಾಡಬೇಕಾಗಿದೆ. ಒಂದು elected bodyಗೆ registered notice ಅನ್ನು ಕೊಟ್ಟಿದ್ದಾರೆಯೇ? ಅದನ್ನು ಯಾವ ರೀತಿಯಾಗಿ ವಜಾ ಮಾಡಿದ್ದಾರೆ? ನೋಟಿಸನ್ನು ಮನೆಯ ಬಾಗಿಲಿಗೆ ಅಂಟಿಸಿದ್ದಾರೆ. ಅವೊತ್ತು ಅವರು ಮನೆಯಲ್ಲಿ ಇರಲಿಲ್ಲ, ಹೇಗೆ ಉತ್ತರ ಕೊಡುತ್ತಾರೆ? ಅವರು ಮಾಡಿರುವ ಅಪರಾಧವಾದರೂ ಏನಿದೆ? ಅದನ್ನು ಹಸ್ತಾಂತರ ಮಾಡಬೇಕೆಂದು resolution

ಮಾಡಿದ್ದಾರೆ. ಅದು ಅವರಿಗೆ ಹೋಗಿದೆಯೇ? ಹಸ್ತಾಂತರ ಆಗಿದೆಯೇ? ಹಸ್ತಾಂತರ ಆಗದೆಯೇ ಇವರು ಯಾವ ರೀತಿಯಾಗಿ ಕ್ರಮ ಜರುಗಿಸುತ್ತಾರೆ? ಪ್ರಜಾತಂತ್ರ ವ್ಯವಸ್ಥೆಯಲ್ಲಿ elected bodyಯನ್ನು ಈ ರೀತಿ ರದ್ದುಪಡಿಸುವುದು ಸರಿಯೇ?

ಶ್ರೀ ಸುಭಾಷ್ ಗುತ್ತೇದಾರ್: ಮಾನ್ಯ ಸಚಿವರು ಸಹಕಾರಿ ನೀತಿಯನ್ನು ಕೊಲೆ ಮಾಡುತ್ತಿದ್ದಾರೆ.

ಶ್ರೀ ಲಕ್ಷ್ಮಣ್ ಸಂಗಪ್ಪ ಸವದಿ: ನಾನು ನಮ್ಮಿಂದ ಕಲಿಯಬೇಕಾಗಿಲ್ಲ.

ಶ್ರೀ ಹೆಚ್.ಸಿ.ಬಾಲಕೃಷ್ಣ: ಎಲ್ಲರಿಂದಲೂ ಕಲಿಯುವುದು ಇರುತ್ತದೆ. ಅವರು ಈ ರೀತಿ ಉತ್ತರ ಕೊಟ್ಟರೆ ಕಷ್ಟವಾಗುತ್ತದೆ.

ಅಧ್ಯಕ್ಷರು: ಎಲ್ಲರೂ ಕುಳಿತುಕೊಳ್ಳಿ. ಮಾನ್ಯ ಮಂತ್ರಿಯವರು ಉತ್ತರ ಕೊಡುತ್ತಾರೆ.

ಶ್ರೀ ಬಂಡೆಪ್ಪ ಕಾಶೆಂಪೂರ್: ಸಹಕಾರಿ ತತ್ವವನ್ನು ಕೊಲೆ ಮಾಡಿ ಇವೊತ್ತು ಎಲ್ಲವನ್ನು ನಾನು ಕಲಿಯಬೇಕಾಗಿಲ್ಲವೆಂದು ಇವರು ಏನು ಹೇಳುವುದು?

ಅಧ್ಯಕ್ಷರು: ಅವರು ಉತ್ತರ ಕೊಡಲಿ. ದಯಮಾಡಿ ಕುಳಿತುಕೊಳ್ಳಿ. ಸಿದ್ದುಸವದಿಯವರೆ ಕುಳಿತುಕೊಳ್ಳಿ.

(ಗೊಂದಲ)

ಶ್ರೀ ಲಕ್ಷ್ಮಣ ಸಂಗಪ್ಪ ಸವದಿ: ಅವರು ವ್ಯಕ್ತಪಡಿಸಿರುವ ಕೆಲವು ವಿಚಾರಗಳನ್ನು ನಾನು ಒಪ್ಪಿಕೊಳ್ಳುವುದಿಲ್ಲ. ಅವರು ಇದರಲ್ಲಿ ರಾಜಕೀಯ ದುರುದ್ದೇಶವಿದೆಯೆಂದು ಹೇಳಿದ್ದಾರೆ. ಇದು ನಾಲ್ಕು ತಿಂಗಳುಗಳಿಂದ ನಡೆದಿರುವಂಥ ಪತ್ರ ವ್ಯವಹಾರ. ಇವರು ಸಭೆ ಸೇರಿ ಅಲ್ಲಿ ಒಂದು ನಿರ್ಣಯ ತೆಗೆದುಕೊಂಡು ಇದನ್ನು ಬೀದರ್‌ಗೆ ವರ್ಗಾಯಿಸುತ್ತೇವೆ, ಇದಕ್ಕೆ ಒಪ್ಪಿಗೆ ಕೊಡಬೇಕೆಂದು ಸರ್ಕಾರಕ್ಕೆ ಸಲ್ಲಿಸಿದಾಗ ಸರ್ಕಾರ ಅದನ್ನು ಸಂಪೂರ್ಣವಾಗಿ ತಿರಸ್ಕಾರ ಮಾಡಿದೆ. ಇವರು ಇದನ್ನು ರಾಜಕೀಯ ದುರುದ್ದೇಶದಿಂದ ಮಾಡಿ ಸಹಕಾರಿ ತತ್ವವನ್ನು ಕೊಲೆ ಮಾಡಿದ್ದಾರೆಂದು ಏನು ಹೇಳಿದ್ದಾರೆ ಅದು ಸತ್ಯಕ್ಕೆ ದೂರವಾಗಿರತಕ್ಕ ಸಂಗತಿ. ಏಕೆಂದರೆ 4 ತಿಂಗಳಿನಿಂದ ಸತತವಾಗಿ ನಡೆದಿರುವ ಪತ್ರವ್ಯವಹಾರ ಇದಾಗಿದೆ.

ಶ್ರೀ ಕೆ.ಎಂ.ಶಿವಲಿಂಗೇಗೌಡ: ನೀವು ಆ ರೀತಿ ಮಾಡಿದ್ದೀರೋ ಇಲ್ಲವೋ ಎಂಬುದು ಎಲ್ಲರಿಗೂ ಗೊತ್ತಾಗುತ್ತದೆ. ವಿಧಾನಸೌಧದಲ್ಲಿ ಕುಳಿತುಕೊಳ್ಳಲು ಎಳೆಯ ಮಕ್ಕಳು ಬಂದಿಲ್ಲ. ಇಲ್ಲಿ ಇರುವವರೆಲ್ಲರೂ ತಿಳುವಳಿಕೆಯುಳ್ಳವರೇ, ನೀವು ಅದನ್ನು ಏಕೆ ಮಾಡಿದ್ದೀರೆಂದು ಎಲ್ಲರಿಗೂ ಗೊತ್ತಿದೆ.

(ಗೊಂದಲ)

ಶ್ರೀ ಲಕ್ಷ್ಮಣ ಸಂಗಪ್ಪ ಸವದಿ: ಸರ್ಕಾರದ ನಿಯಮಗಳನ್ನು ಉಲ್ಲಂಘನೆ ಮಾಡಿ, ಕಾನೂನಿನ ಚೌಕಟ್ಟನ್ನು ಮೀರಿ ಆಡಳಿತ ಮಂಡಳಿಯವರು ತೆಗೆದುಕೊಂಡಿರುವ ನಿರ್ಣಯದ ಅನುಗುಣವಾಗಿ ಇವೊತ್ತು ಅಧಿಕಾರಿಗಳು ಕ್ರಮ ಕೈಗೊಂಡಿದ್ದಾರೆ. ಅದರ ಜೊತೆಗೆ ತಮಗೆ ಇದರಲ್ಲಿ ಏನಾದರೂ ಅನ್ಯಾಯವಾಗಿದ್ದರೆ

ಮೇಲ್ಮನವಿಯನ್ನು ಸಲ್ಲಿಸಿ ನ್ಯಾಯವನ್ನು ಪಡೆಯಬಹುದು ಎಂದು ಸಹ ಇದರಲ್ಲಿ ಉಲ್ಲೇಖ ಮಾಡಿದ್ದೇವೆ.

ಶ್ರೀ ಕೆ.ಎಂ. ಶಿವಲಿಂಗೇಗೌಡ: ಯಾರು ಸ್ಟೇಟ್ ಕಮಿಟಿಗೆ ಎಲೆಕ್ಟ್ ಆಗಿ ಬರಬೇಕಾಗಿತ್ತೋ ಅದರ ಚುನಾವಣೆಯೇ ಇಲ್ಲದಿದ್ದ ಮೇಲೆ ನಿಮ್ಮ ಬಾಡಿಯನ್ನು ಕಟ್ಟಿಕೊಂಡು ಏನು ಮಾಡಬೇಕು? ಅದೊಂದು avoid ಮಾಡುವುದಕ್ಕೋಸ್ಕರ ಇದನ್ನು ಮಾಡಿದ್ದೀರಿ.

ಶ್ರೀ ಲಕ್ಷ್ಮಣ್ ಸಂಗಪ್ಪ ಸವದಿ: ನಾಲ್ಕು ತಿಂಗಳಿನಿಂದ ಆಗಿರುವ ಪತ್ರ ವ್ಯವಹಾರ ಇದು. ಅವರು ಹೇಳುವ ವಿಚಾರವನ್ನು ನಾನು ಒಪ್ಪುವುದಿಲ್ಲ. ಅಧಿಕಾರಿಗಳು ಮಾಡಿರತಕ್ಕದ್ದು ಸರಿಯಾದ ಕ್ರಮವಾಗಿದೆ. ನಿಮಗೆ ಅಗತ್ಯವಿದ್ದರೆ ಮೇಲ್ಮನವಿ ಸಲ್ಲಿಸಿಕೊಳ್ಳಬಹುದು.

(ಗೊಂದಲ)

ಅಧ್ಯಕ್ಷರು: ಶೂನ್ಯ ವೇಳೆಯಲ್ಲಿ ಹೆಚ್ಚು ಚರ್ಚೆ ಮಾಡುವುದಕ್ಕೆ ನಾನು ಅವಕಾಶ ಕೊಡುವುದಿಲ್ಲ. ಮಾನ್ಯ ಬಾಲಕೃಷ್ಣರವರೆ, ತಾವು ಇದನ್ನು ಶೂನ್ಯ ವೇಳೆಯಲ್ಲಿ ಪ್ರಸ್ತಾಪ ಮಾಡಿದ್ದೀರಿ. ಇದು ಇಲ್ಲಿಗೆ ಮುಗಿಯಿತು.

ಶ್ರೀ ಕೆ.ಎಂ. ಶಿವಲಿಂಗೇಗೌಡ: ಇದು ಬಹಳ ಅನ್ಯಾಯ. ಇದನ್ನು ನಾವು ಒಪ್ಪುವುದಿಲ್ಲ.

ಶ್ರೀ ಹೆಚ್.ಸಿ. ಬಾಲಕೃಷ್ಣ: ಅವರು ಕೊಟ್ಟಿರುವ ನೋಟಿಸ್‌ಗೆ ಅಧ್ಯಕ್ಷರು ಲಿಖಿತ ಮೂಲಕ ಉತ್ತರವನ್ನೂ ಕೊಟ್ಟು ಸಮಯವನ್ನೂ ಕೇಳಿದ್ದಾರೆ. ಅವರು ಸಮಯವನ್ನೂ ಕೊಡದೆಯೇ, ಅಲ್ಲಿ ಕೆ.ಎಂ.ಎಫ್. ಚುನಾವಣೆಗೆ ಸಭೆ ಮಾಡಬೇಕಾಗಿತ್ತು, ಅದಕ್ಕಿಂತ ಮೊದಲೆ ಅದನ್ನು ಅನರ್ಹಗೊಳಿಸುವ ಅವಶ್ಯಕತೆ ಏನಿತ್ತು? ನೀವು ಇದನ್ನು ಮೊದಲೇ ಮಾಡಬೇಕಾಗಿತ್ತು, ಇಲ್ಲದಿದ್ದರೆ ಆಮೇಲೆ ಮಾಡಬೇಕಾಗಿತ್ತು. ಅವರ ಓಟು ಬರುವುದಿಲ್ಲವೆಂದು ಹೇಳಿ....

ಶ್ರೀ ಲಕ್ಷ್ಮಣ್ ಸಂಗಪ್ಪ ಸವದಿ: ಅಧಿಕಾರಿಗಳು ಏನು ಹೇಳಿದ್ದಾರೆಂದರೆ, ಒಂದನೇ ತಾರೀಖು ನೋಟಿಸ್ ಕೊಟ್ಟು ಖುದ್ದಾಗಿ ಕಛೇರಿಗೆ ಬಂದು ಹಾಜರಾತಿ ಕೊಟ್ಟು ನಿಮ್ಮ ಅನಿಸಿಕೆಯನ್ನು ಲಿಖಿತ ಮೂಲಕ ಕೊಡಬೇಕೆಂದು ಹೇಳಿದರೂ ಕೂಡ ಆಡಳಿತ ಮಂಡಳಿಯ ಯಾರೂ ಕೂಡ ಖುದ್ದಾಗಿ ಹಾಜರಾಗದೇ ನೇರವಾಗಿ ಫ್ಯಾಕ್ಸ್ ಮೂಲಕ ಮಾಡಿರತಕ್ಕದ್ದು, ಬಹುಶ: ಅವರು ಮಾಡಿರತಕ್ಕ ತಪ್ಪನ್ನು ಅವರೇ ಒಪ್ಪಿಕೊಂಡಿದ್ದಾರೆ ಎಂಬುದು ಕಂಡುಬರುತ್ತದೆ.

(ಗೊಂದಲ)

ಅಧ್ಯಕ್ಷರು: ಈ ಚರ್ಚೆಯನ್ನು ನಾನು ಇಲ್ಲಿಗೆ ಮುಕ್ತಾಯಗೊಳಿಸುತ್ತಿದ್ದೇನೆ. ಈಗ ಮುಂದಿನ ವಿಷಯಕ್ಕೆ ಹೋಗೋಣ. ಮುಂದಿನ ವಿಷಯ ನಿಯಮ 69ರ ಅಡಿಯಲ್ಲಿ ಚರ್ಚೆ.

(ಗೊಂದಲ)

ಶ್ರೀ ಕೆ.ಎಂ. ಶಿವಲಿಂಗೇಗೌಡ: ಕಾನೂನನ್ನು ತೆಗೆಯಿರಿ ಎಲ್ಲವೂ ಗೊತ್ತಾಗುತ್ತದೆ. ಒಂದೇ ನೋಟೀಸ್‌ಗೆ ಅಲ್ಲ ಮಾಡುವುದು. ಮೂರು ನೋಟಿಸ್ ಕೊಡಬೇಕಾಗುತ್ತದೆ.

(ಗೊಂದಲ)

ಅಧ್ಯಕ್ಷರು: ನೋಡಿ ಈ ರೀತಿ ನೀವು ಎಲ್ಲವನ್ನೂ ಒತ್ತಡ ತಂದು ಮಾಡುವುದಕ್ಕೆ ಆಗುವುದಿಲ್ಲ. ನೀವು ಉಳಿದ ಸದಸ್ಯರ ಹಕ್ಕನ್ನು ಕಸಿದುಕೊಳ್ಳುತ್ತಿದ್ದೀರಿ. ನೀವು ಈ ರೀತಿ ಧರಣಿ ಮಾಡುವುದು ಸರಿಯಲ್ಲ.

(ಈ ಹಂತದಲ್ಲಿ ಜನತಾ ದಳ(ಜ್ಯಾತ್ಯಾತೀತ)ಪಕ್ಷದ ಸದಸ್ಯರುಗಳು ಬಾವಿಯಲ್ಲಿ ಧರಣಿಹೂಡಿದರು)

ಅಧ್ಯಕ್ಷರು: ನಿನ್ನೆ ಸಹ ಧರಣಿ ಮಾಡಿ ನಮ್ಮ ಬಹಳಷ್ಟು ಸಮಯ ಹೋಗಿದೆ. ನಿಮಗೆ ಬೇರೆ ದಾರಿ ಇದೆ. ನೀವು ಎಲ್ಲದಕ್ಕೂ ಈ ವೆಲ್‌ಗೆ ಬಂದು ಒತ್ತಾಯ ಮಾಡುವುದಕ್ಕೆ ಆಗುವುದಿಲ್ಲ. ಎಲ್ಲವನ್ನೂ ಬಗೆಹರಿಸಲು ಆಗುವುದಿಲ್ಲ. ನೀವು ಏನು ಹೇಳಬೇಕೋ ಅದನ್ನು ಹೇಳಿದ್ದೀರಿ. ಅವರು ಸಹ ಏನು ಹೇಳಬೇಕೋ ಅದನ್ನು ಹೇಳಿದ್ದಾರೆ. ಮುಂದೆ ಏನು ರೆಮಿಡಿ ಇದೆ ವಿಚಾರ ಮಾಡಿ. ಈ ವಿಷಯವನ್ನು ನಿಯಮ 69 ರಲ್ಲಿ ತನ್ನಿ. ಇಲ್ಲಿ ಶೂನ್ಯ ವೇಳೆಯಲ್ಲಿ ತಂದು ಅದಕ್ಕೆ ಅವರು ಉತ್ತರವನ್ನು ಕೊಟ್ಟ ನಂತರ ತಮಗೆ ಸ್ಪಷ್ಟೀಕರಣಕ್ಕೆ ಅವಕಾಶ ಕೊಟ್ಟೆ, ಎಲ್ಲಾ ಅವಕಾಶವನ್ನೂ ಕೊಟ್ಟಿದ್ದೇನೆ. ಇಲ್ಲಿ ಅಂತಿಮವಾದ ನಿರ್ಣಯ ಕೈಗೊಳ್ಳಲು ಆಗುತ್ತದೆಯೇ? ಇದು ಸರಿಯಲ್ಲ. ಎಲ್ಲದಕ್ಕೂ ತಾವು ಈ ರಿತಿ ವೆಲ್‌ಗೆ ಬಂದು ಒತ್ತಡ ತರುವುದಾದರೆ ಬೇರೆ ಸದಸ್ಯರುಗಳ ಹಕ್ಕನ್ನು ಚ್ಯುತಿ ಮಾಡಿದಂತಾಗುತ್ತದೆ. ಇದು ಒಳ್ಳೆಯದಲ್ಲ.

ಶ್ರೀ ಸಿದ್ದರಾಮಯ್ಯ(ವಿರೋಧ ಪಕ್ಷದ ನಾಯಕರು): ನೀವು ಹೇಳತಕ್ಕದ್ದು, ನಿಯಮಾವಳಿಗಳಲ್ಲಿ ತಂದಂಥ ಯಾವುದೇ ವಿಚಾರಕ್ಕೆ ಮಂತ್ರಿಗಳು ಉತ್ತರವನ್ನು ಕೊಡಬೇಕು. ಅದಕ್ಕೆ ಅವತ್ತೇ ಉತ್ತರ ಕೊಡಬೇಕೆಂದು ಇಲ್ಲ. ಮುಂದಿನ ದಿವಸ ಇಲ್ಲವೇ ತಕ್ಷಣವೇ ಕೊಡಬಹುದು. ನಿನ್ನೆ ಇದನ್ನು ಕೇಳಿದ್ದೀರಿ, ಇವತ್ತು ಮಂತ್ರಿಗಳು ಉತ್ತರವನ್ನು ಕೊಟ್ಟಿದ್ದಾರೆ. ಈಗ ಅವರು ಕೊಟ್ಟಿರುವ ಉತ್ತರವನ್ನು ನಾನೂ ನೋಡಿದೆ. ಒಂದನೇ ತಾರೀಖು ನೋಟಿಸ್ ಕೊಟ್ಟಿದ್ದಾರೆ. ನೋಟಿಸ್‌ಗೆ ಉತ್ತರ ಕೊಡಲು ಒಂದು ವಾರ ಅವರಿಗೆ ಸಮಯ ಕೊಟ್ಟಿದ್ದಾರೆ. 9ನೇ ತಾರೀಖಿಗೆ ತುರಾತುರಿಯಲ್ಲಿ ಅದನ್ನು ಸೂಪರ್‌ಸೀಡ್ ಮಾಡಿಬಿಟ್ಟಿದ್ದಾರೆ. ಅವತ್ತೇ ಇವರು ಅದಕ್ಕೆ ಬೇಕಾದಂಥ ಉತ್ತರವನ್ನೂ ಕೊಟ್ಟಿದ್ದಾರೆ. ನಮಗೆ ಸಮಯ ಬೇಕು ಎಂದು ಕೇಳಿದ್ದಾರೆ. ಆದರೆ, ಇಲ್ಲಿ ಅವರನ್ನು ಕರೆದು ಕೇಳಿ ಸಮಯ ಕೊಟ್ಟು ಮಾಡಿದ್ದರೆ ಈ ಪ್ರಶ್ನೆ ಉದ್ಭವವಾಗುತ್ತಿರಲಿಲ್ಲ. Elected body ಇತ್ತು. ಆದ್ದರಿಂದ ನಾನು ಮಾನ್ಯ ಮಂತ್ರಿಯವರಿಗೆ ಹೇಳುವುದೇನೆಂದರೆ, ಈಗಲೂ ಅದನ್ನು ಪರಿಶೀಲನೆ ಮಾಡಿ. ಹೈಕೋರ್ಟ್ ಆದೇಶ ಸಹ ಬಂದಿದೆಯಂತೆ, ಅಧಿಕಾರಿಗಳು ಬಹಳ ತುರಾತುರಿಯಲ್ಲಿ

ಇದನ್ನು ಸೂಪರ್‌ಸೀಡ್ ಮಾಡತಕ್ಕಂಥ ನಿರ್ಣಯ ಮಾಡಿರುವುದರಿಂದ, ಬಹುಶ: ಇದು ಕಾನೂನಿನ ಪ್ರಕಾರವೂ ಇಲ್ಲ, ಸ್ಟೇ ಸಹ ಇದೆ, ಮತ್ತೆ ಪರಿಶೀಲನೆ ಮಾಡುವುದು ಒಳ್ಳೆಯದು. ಇಲ್ಲದಿದ್ದರೆ ಇದು ಕಾನೂನು ಬಾಹಿರವಾಗುತ್ತದೆ. ಆದ್ದರಿಂದ ಮಾನ್ಯ ಮಂತ್ರಿಯವರು ದೈರ್ಯಮಾಡಿ ಇದನ್ನು ಪರಿಶೀಲನೆ ಮಾಡಬೇಕು.

ಶ್ರೀ ಲಕ್ಷ್ಮಣ್ ಸಂಗಪ್ಪ ಸವದಿ: ಆಗಬಹುದು, ಇದನ್ನು ಪರಿಶೀಲನೆ ಮಾಡುತ್ತೇನೆ.

ಶ್ರೀ ಸಿದ್ದರಾಮಯ್ಯ: ಪರಿಶೀಲನೆ ಎಂದರೆ ಸೂಪರ್‌ಸೀಡ್ ಮಾಡಿರುವ orderನ್ನು set aside ಮಾಡಬೇಕು. ಸೂಪರ್‌ಸೀಡ್ ಮಾಡಿರುವ orderನ್ನು set aside ಮಾಡಿ, hear ಮಾಡಿ ಅಮೇಲೆ ಮಾಡಬೇಕು.

ಶ್ರೀ ಬಸವರಾಜ ಎಸ್. ಬೊಮ್ಮಾಯಿ: ನಿಮ್ಮ ಬೇಡಿಕೆಯನ್ನು ಅವರು ಕೂಡಲೆ ಒಪ್ಪಿಕೊಂಡಿದ್ದಾರೆ.

ಶ್ರೀ ಸಿದ್ದರಾಮಯ್ಯ: ನೀವು on the face of it ತೆಗೆದುಕೊಂಡರೆ ಏನೂ ಮಾಡುವುದಕ್ಕೆ ಆಗುವುದಿಲ್ಲ. ಅವರು ಪರಿಹಾರ ಕೇಳಿರುವುದು ಏನು? The order of superseding the society should be set aside. It should be set aside. They may be heard and fresh order should be passed ಎಂದು ಹೇಳಬೇಕು.

(ಗೊಂದಲ)

ಶ್ರೀ ಲಕ್ಷ್ಮಣ್ ಸಂಗಪ್ಪ ಸವದಿ: ಮಾನ್ಯ ವಿರೋಧ ಪಕ್ಷದ ನಾಯಕರು ಹೇಳಿರತಕ್ಕ ಸಲಹೆಯಲ್ಲಿ ಬಹಳಷ್ಟನ್ನು ನಾನು ಒಪ್ಪಿಕೊಳ್ಳುತ್ತೇನೆ. ಅವರು ಕೊಟ್ಟಿರುವ ಸಲಹೆಯನ್ನು ನಾನು ಗಂಭೀರವಾಗಿ ಪರಿಗಣಿಸಿದ್ದೇನೆ. ಅದರ ಜೊತೆಗೆ ಅವರು ಮೇಲ್ಮನವಿಯನ್ನು ಮಾಡಿದಾಗ ಅದನ್ನು ಖಂಡಿತವಾಗಿ ಕಾನೂನು ಚೌಕಟ್ಟಿನಲ್ಲಿ ಪರಿಶೀಲನೆ ಮಾಡಿ ನ್ಯಾಯ ಕೊಡಿಸಲು ಸಿದ್ಧವಾಗಿದ್ದೇನೆ.

(ಈ ಹಂತದಲ್ಲಿ ಶ್ರೀ ಬಂಡೆಪ್ಪ ಕಾಶೆಂಪೂರ್‌ರವರು ಸದನದ ಬಾವಿಯಿಂದ ಮಾತನಾಡುತ್ತಿದ್ದರು)

ಅಧ್ಯಕ್ಷರು: ತಾವು ಶೂನ್ಯ ವೇಳೆಯಲ್ಲಿ ಇದನ್ನು ಪ್ರಸ್ತಾಪ ಮಾಡಿದ್ದೀರಿ. ನಿಜವಾಗಿ ಹೇಳಬೇಕೆಂದರೆ ಶೂನ್ಯ ವೇಳೆಯಲ್ಲಿ ಪ್ರಸ್ತಾಪ ಮಾಡಿದಂಥ ವಿಷಯವನ್ನು ಸರ್ಕಾರದ ಗಮನಕ್ಕೆ ತರುವಂಥದ್ದು. ಅವರು ಉತ್ತರವನ್ನು ಕೊಡಬೇಕೆಂದು ಒತ್ತಾಯ ಸಹ ಮಾಡುವಂತಿಲ್ಲ. ಅದರೂ ಸಹ ನಾನು ಹೇಳಿದಮೇಲೆ ಅವರು ಲಿಖಿತವಾದ ಉತ್ತರವನ್ನೂ ಕೊಟ್ಟಿದ್ದಾರೆ. ಅದು ನಿಮಗೆ ಸಮಾಧಾನ ತಂದಿರಬಹುದು ಅಥವಾ ತಾರದೆಯೂ ಇರಬಹುದು. ತಾವು ವೆಲ್‌ಗೆ ಬಂದು ಮಾತನಾಡುವುದು, ಚರ್ಚೆ ಮಾಡುವುದು ಅಲ್ಲ. ಏನಾದರು ಮಾತನಾಡುವುದಾದರೆ

ನಿಮ್ಮ ನಿಮ್ಮ ಸ್ಥಳಗಳಿಗೆ ಹೋಗಿ ಮಾತನಾಡಬಹುದು. ಶೂನ್ಯ ವೇಳೆಯಲ್ಲಿ ಪ್ರಸ್ತಾಪ ಮಾಡುವಂಥದ್ದು ಸರ್ಕಾರದ ಗಮನಕ್ಕೆ ತರುವಂಥದ್ದು, ಏನಾದರೂ ತುರ್ತು ವಿಷಯ ಬಗ್ಗೆ ಹೇಳಿವಂಥದ್ದು; ಅದನ್ನು ಸರ್ಕಾರದ ಗಮನಕ್ಕೆ ತರುವಂಥ ಕೆಲಸವನ್ನು ಮಾಡಿದ್ದೀರಿ. ಸಚಿವರೂ ಲಿಖಿತವಾದ ಉತ್ತರವನ್ನು ಕೊಟ್ಟಿದ್ದಾರೆ. ಹೀಗಾಗಿ ಈ ಚರ್ಚೆಯನ್ನು ನಾನು ಇಲ್ಲಿಗೆ ಮುಕ್ತಾಯಗೊಳಿಸಿದ್ದೇನೆ. ಇದೇ ವಿಷಯವನ್ನು ಮತ್ತೆ ನೀವು ಬೇರೊಂದು ರೂಪದಲ್ಲಿ ತೆಗೆದುಕೊಂಡು ಬನ್ನಿ. ಇವೊತ್ತಿನ ಅಜೆಂಡಾದಲ್ಲಿ ರೂಲ್ 69 ಅಡಿಯಲ್ಲಿ ಪ್ರಸ್ತಾಪಿಸಬೇಕಾದ ವಿಷಯ ಸೇರಿದೆ. ಇದಲ್ಲದೆ ವಿತ್ತೀಯ ಕಾರ್ಯಕಲಾಪಗಳನ್ನೂ ಸಹ ನಾವು ನಡೆಸಬೇಕಾಗಿದೆ. ಈ ರೀತಿ ನೀವು ವೆಲ್‌ನಲ್ಲಿ ಇದ್ದರೆ, ಉಳಿದ ಕಲಾಪಗಳನ್ನು ನಡೆಸಲಿಕ್ಕೆ ಅನಾನುಕೂಲವಾಗುತ್ತದೆ. ಆ ದೃಷ್ಟಿಯಿಂದ ನೀವು ನನಗೆ ಸಹಕಾರ ಕೊಡಿ, ದಯವಿಟ್ಟು ನಿಮ್ಮ ಸ್ಥಳಕ್ಕೆ ಹೋಗಿ.

(ಗೊಂದಲ)

[ಧರಣಿ ನಿರತ ಸದಸ್ಯರು ಸದನದ ಬಾವಿಯಿಂದ ಮಾತನಾಡುತ್ತಿದ್ದರು]

ಅಧ್ಯಕ್ಷರು:– ಕಾನೂನು ರೀತಿಯಲ್ಲಿ ಈ ಬಗ್ಗೆ ಮುಂದೆ ಏನು ಕ್ರಮ ತೆಗೆದುಕೊಳ್ಳಬೇಕು ಎಂಬುದು ನಿಮಗೆ ಬಿಟ್ಟಿದ್ದು. ನೀವು ಏನನ್ನು ಹೇಳಬೇಕಿತ್ತೋ ಅದನ್ನು ಹೇಳಿದ್ದೀರಿ. ಸರ್ಕಾರ ಅದಕ್ಕೆ ಉತ್ತರ ಕೊಟ್ಟಿದೆ. ಆದರೆ ಅಂತಿಮವಾಗಿ 'ಇದು ಹೀಗೇ ಆಗಬೇಕು' ಎಂದು insist ಮಾಡಲಿಕ್ಕಾಗುವುದಿಲ್ಲ. ನೀವು ಈ ರೀತಿಯಾಗಿ ವೆಲ್‌ನಲ್ಲಿ ಬರುವುದರಿಂದ ಉಳಿದ ಕಾರ್ಯಕಲಾಪಗಳನ್ನು ನಡೆಸಲಿಕ್ಕೆ ಅನಾನುಕೂಲವಾಗುತ್ತದೆ. ಉಳಿದ ಎಲ್ಲಾ ಶಾಸಕರ ಹಕ್ಕನ್ನು ನೀವುಮೊಟಕುಗೊಳಿಸಿದಂತಾಗುತ್ತದೆ.

ಶ್ರೀ ಎಸ್.ಸುರೇಶ್ ಕುಮಾರ್ :– ಮಾನ್ಯ ಅಧ್ಯಕ್ಷರೆ, ಇಲ್ಲಿ ಎಲ್ಲಾ ಹಿರಿಯ ಸದಸ್ಯರೇ ಇದ್ದಾರೆ. ಶೂನ್ಯ ವೇಳೆಯಲ್ಲಿ ಬಹಳ ಗಂಭೀರವಾದ ವಿಚಾರವನ್ನು ಪ್ರಸ್ತಾಪಿಸಿದ್ದಾರೆ. ಪ್ರತಿಪಕ್ಷದ ನಾಯಕರು ಈ ಬಗ್ಗೆ 'ನಿಜವಾಗಿಯೂ ಅಲ್ಲಿ ಅನ್ಯಾಯವಾಗಿದ್ದರೆ, ಅದನ್ನು set aside ಮಾಡಿ' ಎಂದು ಸಲಹೆಯೊಂದನ್ನು ಕೊಟ್ಟಿದ್ದಾರೆ.

(ಗೊಂದಲ)

[ಧರಣಿ ನಿರತ ಸದಸ್ಯರು ಸದನದ ಬಾವಿಯಿಂದ ಮಾತನಾಡುತ್ತಿದ್ದರು]

ಶ್ರೀ ಎಸ್.ಸುರೇಶ್‌ಕುಮಾರ್:– ನೀವು ಅಲ್ಲಿ ನಿಂತುಕೊಂಡು 'ಹೀಗೇ ಮಾಡಬೇಕು' ಎಂದು direction ಕೊಡಲಿಕ್ಕಾಗುವುದಿಲ್ಲ, order ಮಾಡುವುದಕ್ಕಾಗುವುದಿಲ್ಲ. ಮಾನ್ಯ ಅಧ್ಯಕ್ಷರೆ, ಶೂನ್ಯ ವೇಳೆಯಲ್ಲಿ ಪ್ರಸ್ತಾಪ ಮಾಡಲಿಕ್ಕೆ ಮಾತ್ರ ಅವಕಾಶವಿದೆ. ಪ್ರಸ್ತಾಪವಾದ ವಿಷಯಕ್ಕೆ ಮಾನ್ಯ ಸಚಿವರು

ಉತ್ತರವನ್ನು ಸಹ ಕೊಟ್ಟಿದ್ದಾರೆ. ಈ ಬಗ್ಗೆ ಬಂದಿರುವ ಸಲಹೆಯನ್ನೂ ಸಹ ಪರಿಶೀಲಿಸುತ್ತೇನೆಂದು ಹೇಳಿದ್ದಾರೆ. ಇದನ್ನು ಇಲ್ಲಿಗೆ ಮುಕ್ತಾಯ ಮಾಡಿದ್ದೇನೆಂದು ನೀವು ರೂಲಿಂಗ್ ಕೊಟ್ಟಮೇಲೆ, ದಯವಿಟ್ಟು ಧರಣಿ ನಿರತ ಸದಸ್ಯರು ವೆಲ್‌ನಿಂದ ವಾಪಸ್ ಹೋಗಬೇಕು.

[ಗೊಂದಲ]

[ಧರಣಿ ನಿರತ ಸದಸ್ಯರು ಸದನದ ಬಾವಿಯಿಂದ ಮಾತನಾಡುತ್ತಿದ್ದರು]

ಅಧ್ಯಕ್ಷರು:– ವೆಲ್‌ನಲ್ಲಿ ನಿಂತು ಮಾತನಾಡಿದ ಯಾವ ವಿಷಯವೂ ಸಹ ಕಡತಕ್ಕೆ ಹೋಗುವುದಿಲ್ಲ.

[ಗೊಂದಲ]

[ಧರಣಿ ನಿರತ ಸದಸ್ಯರು ಸದನದ ಬಾವಿಯಿಂದ ಮಾತನಾಡುತ್ತಿದ್ದರು]

ಅಧ್ಯಕ್ಷರು:– ಮಾನ್ಯ ಕಾಶೆಂಪೂರ್‌ರವರೆ, ನೀವೂ ಸಹ ಮಂತ್ರಿಗಳಾಗಿ ಕೆಲಸ ಮಾಡಿದ್ದೀರಿ. ದಯವಿಟ್ಟು ನಿಮ್ಮ ಸ್ಥಾನಗಳಿಗೆ ಹೋಗಿ. ಉಳಿದ ವಿಷಯವನ್ನು ಮತ್ತೆ ಮಾತನಾಡೋಣ. ಒಂದು ಹಂತದವರೆಗೆ ನೀವು ಸರ್ಕಾರದ ಮೇಲೆ ಒತ್ತಡ ತರಬಹುದು. ಆದರೆ ಹೀಗೇ ಆಗಬೇಕೆಂದು ನೀವು dictate ಮಾಡಲಿಕ್ಕಾಗುವುದಿಲ್ಲ.

[ಗೊಂದಲ]

[ಧರಣಿ ನಿರತ ಸದಸ್ಯರು ಸದನದ ಬಾವಿಯಿಂದ ಮಾತನಾಡುತ್ತಿದ್ದರು]

ಅಧ್ಯಕ್ಷರು:– ನೀವು ನಿಮಗೆ ಅನ್ಯಾಯವಾಗಿದ್ದನ್ನು ಇಲ್ಲಿ ಪ್ರಸ್ತಾಪ ಮಾಡಿದ್ದೀರಿ. ಸರ್ಕಾರದ ಮೇಲೆ ಮಾಡಬೇಕಾದ ಆಪಾದನೆಗಳೆಲ್ಲವನ್ನೂ ಮಾಡಿದ್ದೀರಿ. ಇದು 'ರಾಜಕೀಯ ಪಿತೂರಿ' ಎಂದು ಹೇಳಿದ್ದೀರಿ. ಆಯಿತು, message ಹೋಗಿದೆ. ಮೊದಲು ನೀವು ನಿಮ್ಮ ಸ್ಥಾನಗಳಿಗೆ ಹಿಂದಿರುಗಿ. ಕಾನೂನು ರೀತ್ಯಾ ನಿಮಗೆ ಬೇರೆ remedies ಇವೆ. ನೀವು ಈ ರೀತಿ ವೆಲ್‌ನಲ್ಲಿ ಕುಳಿತರೆ, ಮತ್ತೆ ಇವತ್ತೂ ಸಹ proceedings stall ಆಗುತ್ತದೆ. ಇಲ್ಲಿ ಎನು ನಡೆಯುತ್ತಿದೆ ಎಂಬುದನ್ನೆಲ್ಲಾ ಸಾರ್ವಜನಿಕರು ಗಮನಿಸುತ್ತಿದ್ದಾರೆ. ಸದನದಲ್ಲಿ ಚರ್ಚೆಗೆ ಹೆಚ್ಚು ಅವಕಾಶ ಕೊಡಬೇಕು, ಇಲ್ಲಿ debates ನಡೆಯಲಿ, ನೀವು ವಿಷಯ ಮಂಡನೆ ಮಾಡಿ ಎಂದು ನಾನು ಮೊದಲಿನಿಂದಲೂ ಹೇಳುತ್ತಲೇ ಇದ್ದೇನೆ. ಈ ರೀತಿ ಧರಣಿ ಸತ್ಯಾಗ್ರಹ ಮಾಡುವುದರಿಂದ ಉಳಿದ ಶಾಸಕರೂ ಸಹಿತ ಇದರಲ್ಲಿ participation ಮಾಡಲಿಕ್ಕೆ ತೊಂದರೆಯಾಗುತ್ತದೆ. ಇನ್ನೂ ಚರ್ಚಿಸಬೇಕಾದ ಬಹಳಷ್ಟು ಮಹತ್ವದ ವಿಷಯಗಳಿವೆ. ಇವತ್ತು ಇನ್ನೂ ರೂಲ್ 69ರ ಅಡಿಯಲ್ಲಿನ ವಿಷಯ

ಚರ್ಚೆಯಾಗಬೇಕಾಗಿದೆ, ಅಲ್ಲದೆ ವಿತ್ತೀಯ ಕಲಾಪಗಳೂ ಸಹ ನಡೆಯಬೇಕಾಗಿದೆ. ಒಂದೇ ವಿಷಯಕ್ಕೆ ಪೂರಕವಾಗಿ ನೀವು ಅಲ್ಲೇ ನಿಂತು, ಉಳಿದ ಕಲಾಪಗಳನ್ನು stall ಮಾಡುವುದು ಸರಿಯಲ್ಲ. ದಯವಿಟ್ಟು ನಿಮ್ಮ ನಿಮ್ಮ ಸ್ಥಾನಗಳಿಗೆ ಹೋಗಿ ಎಂದು ನಾನು ನಿಮ್ಮನ್ನು request ಮಾಡಿಕೊಳ್ಳುತ್ತಿದ್ದೇನೆ.

[ಗೊಂದಲ]

[ಧರಣಿ ನಿರತ ಸದಸ್ಯರು ಸದನದ ಬಾವಿಯಿಂದ ಮಾತನಾಡುತ್ತಿದ್ದರು]

ಶ್ರೀ ಬಸವರಾಜ ಎಸ್.ಬೊಮ್ಮಾಯಿ :– ಮಾನ್ಯ ಸಭಾಧ್ಯಕ್ಷರೆ, ಈಗಾಗಲೇ ಮಾನ್ಯ ಸಚಿವರು ಇದಕ್ಕೆ ಸಂಪೂರ್ಣವಾದ ಉತ್ತರವನ್ನು ಕೊಟ್ಟಿದ್ದಾರೆ. ಯಾವ ರೂಲ್ ಅಡಿಯಲ್ಲಿ, ಕಾನೂನಿನ ಚೌಕಟ್ಟಿನಲ್ಲಿ ಇದನ್ನು ಮಾಡಲಾಗಿದೆ ಎಂದು ಅವರು ಹೇಳಿದ್ದಾರೆ. ಮೇಲ್ಮನವಿ ಸಲ್ಲಿಸುವುದಕ್ಕೆ ಅವಕಾಶ ಕೂಡ ಇದೆಯೆಂದು ಅವರು ಹೇಳಿದ್ದಾರೆ. ಈ ರೀತಿ supersede ಆಗಿರುವುದು ಇದೇ ಮೊದಲನೇ ಬಾರಿಯಲ್ಲ. ಹಿಂದೆಯೂ ಕೂಡ ಬಹಳಷ್ಟು supersede ಆಗಿವೆ. ಆಗ ಕೇಳಿದಾಗ ಸಹ ಯಾರು ನ್ಯಾಯ ಕೊಟ್ಟಿದ್ದಾರೆ? ಯಾರೂ ನ್ಯಾಯ ಕೊಟ್ಟಿಲ್ಲ? ಎಂಬುದು ನಮಗೆ ಗೊತ್ತಿದೆ. ನೀವು ಅಧಿಕಾರದಲ್ಲಿದ್ದಾಗ ಏನೇನು ಆಗಿದೆ ಎಂಬುದೆಲ್ಲವೂ ಕೂಡ ಜನತೆಗೆ ಗೊತ್ತಿದೆ. ಇದು ಹೊಸದೇನಲ್ಲ. ಆದ್ದರಿಂದ ಅದಕ್ಕೆ ಸಕಾರಣಗಳಿವೆ. Entire bodyಯನ್ನು supersede ಮಾಡುವಂತಹ ಅವಶ್ಯಕತೆ ಇತ್ತು. ಅದನ್ನು ಕಾನೂನಿನ ಚೌಕಟ್ಟಿನಲ್ಲಿ ಮಾಡಿದ್ದಾರೆ. ಅದಕ್ಕೆ ನೀವು ಮೇಲ್ಮನವಿ ಸಲ್ಲಿಸಿ ನ್ಯಾಯ ದೊರಕಿಸಿಕೊಳ್ಳಿ. ಈ ಸದನದ ಸಮಯವನ್ನು ವ್ಯಯ ಮಾಡಬೇಡಿ ಮತ್ತು ಇತರ ಸದಸ್ಯರ ಹಕ್ಕಿಗೆ ಚ್ಯುತಿ ತರಬೇಡಿ.

[ಈ ಹಂತದಲ್ಲಿ ಧರಣಿ ನಿರತರಾಗಿದ್ದ ಮಾನ್ಯ ಸದಸ್ಯರಾದ ಶ್ರೀ ಹೆಚ್.ಸಿ.ಬಾಲಕೃಷ್ಣರವರು ತಮ್ಮ ಸ್ಥಾನಕ್ಕೆ ಹಿಂದಿರುಗಿದರು]

ಶ್ರೀ ಹೆಚ್.ಸಿ.ಬಾಲಕೃಷ್ಣ :– ಮಾನ್ಯ ಅಧ್ಯಕ್ಷರೆ, ನಾವು ತಮ್ಮ ಮುಖಾಂತರ ಮಾನ್ಯ ಮಂತ್ರಿಗಳನ್ನು ಕೇಳತಕ್ಕದ್ದು ಇಷ್ಟೇ. 29 [ಸಿ] ಅಡಿಯಲ್ಲಿ ಅವರು ವಜಾಗೊಳಿಸಿದ್ದಾರೆ. ಅದಕ್ಕೆ ಅವರು 'ಬೀದರ್‌ನಲ್ಲಿ ಈ ಒಂದು ಒಕ್ಕೂಟದ ಕೆಲಸ ಕಾರ್ಯಗಳು ನಡೆಯುತ್ತವೆ' ಎಂಬ ಒಂದು ಕಾರಣವನ್ನು ಕೊಟ್ಟಿದ್ದಾರೆ. ನಾವು ನಿಮ್ಮ ಮುಖಾಂತರ ಅವರನ್ನು ಕೇಳುತ್ತೇವೆ, ಬೀದರ್‌ನಲ್ಲಿ ಅದು ನಡೆಯುತ್ತಿದ್ದರೆ, ನಾವು ನಿಮ್ಮ ಆದೇಶಕ್ಕೆ ಮರ್ಯಾದೆ ಕೊಟ್ಟು ವಾಪಸ್ ಬರುತ್ತೇವೆ. ಅದು ಅಲ್ಲಿ ನಡೆಯುತ್ತಿಲ್ಲ ಎಂದಾಗ ಏನು ಮಾಡುತ್ತಾರೆ ಎಂಬುದನ್ನು ಮಾನ್ಯ ಮಂತ್ರಿಗಳು ಹೇಳಬೇಕು. ಸಂಬಂಧಪಟ್ಟ ಅಧಿಕಾರಿಗಳ ಮೇಲೆ ಕ್ರಮ ಕೈಗೊಳ್ಳುತ್ತಾರಾ? ಇದನ್ನು

set aside ಮಾಡುತ್ತಾರಾ? ಎಂಬುದನ್ನು ದಯಮಾಡಿ ತಿಳಿಸಬೇಕು. ಈಗ ಅದು ನಡೆಯುತ್ತಿರುವುದು ಗುಲ್ಬರ್ಗಾದಲ್ಲೇ. ಮೀಟಿಂಗ್ ಕರೆದಿರುವುದೂ ಸಹ ಗುಲ್ಬರ್ಗಾದಲ್ಲೇ. ಇವರು ಇದು ಬೀದರ್‌ನಲ್ಲಿ ನಡೆಯುತ್ತಿದೆ ಎಂದು ಕಾರಣ ಕೊಟ್ಟಿದ್ದಾರೆ. ಬೀದರ್‌ನಲಿ ಅದು ನಡೆಯುತ್ತಿಲ್ಲ ಎಂದ ಮೇಲೆ, ಅದಕ್ಕೆ ಅವರು ಏನು ಮಾಡುತ್ತಾರೆ ಎಂಬುದನ್ನು ಅವರು ಸಭೆಗೆ ಹೇಳಬೇಕಲ್ಲವೇ?

[ಗೊಂದಲ]

ಶ್ರೀ ಬಸವರಾಜ್ ಎಸ್. ಬೊಮ್ಮಾಯಿ :– ತಮಗೆ ಬಂದ ಮಾಹಿತಿ ಪ್ರಕಾರ, ಅಧಿಕಾರಿಗಳು ಕೊಟ್ಟ ಮಾಹಿತಿ ಪ್ರಕಾರ ಅವರು ಕ್ರಮ ತೆಗೆದುಕೊಂಡಿದ್ದಾರೆ.

[ಗೊಂದಲ]

ಶ್ರೀ ಹೆಚ್. ಸಿ.ಬಾಲಕೃಷ್ಣ :– ಅಧಿಕಾರಿಗಳು ನಿಮಗೆ ಸರಿಯಾದ ಮಾಹಿತಿ ಕೊಟ್ಟಿಲ್ಲ. ಅವರ ಮೇಲೆ ಕ್ರಮ ತೆಗೆದುಕೊಳ್ಳಿ.

[ಗೊಂದಲ]

ಶ್ರೀ ಬಸವರಾಜ ಎಸ್. ಬೊಮ್ಮಾಯಿ :– ನಿಮ್ಮ ಹತ್ತಿರ ಇರುವ ಮಾಹಿತಿ ಕೊಡಿ. ಅದನ್ನು ನಾವು ಪರಿಶೀಲನೆ ಮಾಡುತ್ತೇವೆ.

[ಗೊಂದಲ]

ಅಧ್ಯಕ್ಷರು :– ದಯವಿಟ್ಟು ನಿಮ್ಮ ಸ್ಥಾನಕ್ಕೆ ವಾಪಸ್ ಹೋಗಿ ಎಂದು ಮಾನ್ಯ ಸದಸ್ಯರಲ್ಲಿ ನಾನು ವಿನಂತಿ ಮಾಡಿಕೊಳ್ಳುತ್ತೇನೆ.

[ಗೊಂದಲ]

ಅಧ್ಯಕ್ಷರು :– ದಯವಿಟ್ಟು ಎಲ್ಲಾ proceedings stall ಮಾಡಬೇಡಿ. ಆ ಬಗ್ಗೆ ನೀವು ರಾಜಕೀಯವಾಗಿ ಹೋರಾಟ ಮಾಡಿ.

[ಗೊಂದಲ]

ಅಧ್ಯಕ್ಷರು :– ನೀವು ಶೂನ್ಯ ವೇಳೆಯಲ್ಲಿ ಏನೊಂದು ವಿಷಯವನ್ನು ಪ್ರಸ್ತಾಪ ಮಾಡಿದ್ದೀರಿ, ಆ ಬಗ್ಗೆ ಚರ್ಚೆಯಾಗಿದೆ, ಅದಕ್ಕೆ ಸರ್ಕಾರದಿಂದ ಉತ್ತರ ಕೊಡಿಸಿದ್ದೇನೆ. ಒಬ್ಬ ಸಭಾಧ್ಯಕ್ಷರು ಇದಕ್ಕಿಂತ ಹೆಚ್ಚಿಗೆ ಏನೂ ಮಾಡಲಿಕ್ಕಾಗುವುದಿಲ್ಲ. ಉಳಿದ proceedings ನಡೆಸಲಿಕ್ಕೆ ನೀವು ನನಗೆ ಸಹಕಾರ ಕೊಡಿ ಎಂದು ನಾನು ಕೇಳುತ್ತಿದ್ದೇನೆ. Please, I request you. ದಯವಿಟ್ಟು ಎಲ್ಲೂರು ನಿಮ್ಮ ಸ್ಥಾನಕ್ಕೆ ಹೋಗಿ. ಉಳಿದ proceedings ಅನ್ನು ನಾವು ನಡೆಸಿಕೊಡಬೇಕಾಗಿದೆ.

[ಗೊಂದಲ]

ಶ್ರೀ ಬಸವರಾಜ ಎಸ್.ಬೊಮ್ಮಾಯಿ :– ಮಾನ್ಯ ಅಧ್ಯಕ್ಷರೆ, ಅಲ್ಲಿರುವ ಹಾಲು ಉತ್ಪಾದಕರ, ರೈತರ ಹಿತ ರಕ್ಷಣೆ ಸಲುವಾಗಿ, ಅನ್ಯಾಯವಾಗುತ್ತಿರುವುದನ್ನು ತಪ್ಪಿಸುವ ಸಲುವಾಗಿ, ಕಾನೂನಿನ ಚೌಕಟ್ಟಿನಲ್ಲಿ ಅಧಿಕಾರವನ್ನು ಬಳಕೆ ಮಾಡಿ, ಸರಿಯಾದಂತಹ ಕ್ರಮವನ್ನು ನಮ್ಮ ಸರ್ಕಾರ ತೆಗೆದುಕೊಂಡಿದೆ. ಅಲ್ಲಿರುವ ಹಾಲು ಉತ್ಪಾದಕರ ಹಿತ ರಕ್ಷಣೆ ಸಲುವಾಗಿ ಈ ಕ್ರಮವನ್ನು ತೆಗೆದುಕೊಂಡಿದೆ. ನಿಮಗೆ

ಹಾಲು ಉತ್ಪಾದಕರ ಹಿತರಕ್ಷಣೆ ಬೇಕೋ, ರಾಜಕಾರಣ ಬೇಕೋ ಎಂಬುದನ್ನು ನೀವೇ ಹೇಳಬೇಕು.

[ಗೊಂದಲ]

ಶ್ರೀ ಸಿದ್ದರಾಮಯ್ಯ :– Prima facie, the order superseding the society, the Gulbarga milk Union, looks it is illegal. ಏಕೆಂದರೆ ಅವರಿಗೆ ಅವಕಾಶವನ್ನೇ ಕೊಡದೇ ಸೂಪರ್‌ಸೀಡ್ ಮಾಡುವುದು ಸರಿಯಲ್ಲ. ಅವರ ಕಛೇರಿಯನ್ನು ಗುಲ್ಬರ್ಗಾದಲ್ಲೇ ಇಟ್ಟುಕೊಂಡಿದ್ದಾರೆ, ಅದನ್ನು ಬದಲಾವಣೆ ಮಾಡಿಲ್ಲ. ಸೂಪರ್‌ಸೀಡ್ ಮಾಡಲು 'ಅವರು ಇಲ್ಲಿಂದ ಬೀದರ್‌ಗೆ ಹೋಗುತ್ತಿದ್ದಾರೆ, ಅಧಿಕಾರಿಗಳು ಹೇಳಿದರೂ ಕೂಡ ಕೇಳದೇ ಅವರು ಮಾಡುತ್ತಿದ್ದಾರೆ' ಎಂಬ ಬಲವಾದ ಕಾರಣ ಇದೆ ಎಂದು ಸರ್ಕಾರ ಹೇಳುತ್ತಿದೆ. But, the truth is, ಅದು ಗುಲ್ಬರ್ಗಾದಲ್ಲೇ ಇದೆ. ಅದು ಬದಲಾವಣೆ ಆಗಿಲ್ಲ. ಅಲ್ಲೇ ಮೀಟಿಂಗ್ ಮಾಡುತ್ತಿದ್ದಾರೆ. ಇವತ್ತೂ ಸಹ ಅಲ್ಲೇ ಮೀಟಿಂಗ್ ಕರೆದಿದ್ದರು. ವಸ್ತುಸ್ಥಿತಿ ಹೀಗಿರುವುದರಿಂದ, 7ನೇ ತಾರೀಖು ನೋಟಿಸ್ ಕೊಟ್ಟು, 9ನೇ ತಾರೀಖು ಸೂಪರ್‌ಸೀಡ್ ಮಾಡಿರುವುದರಲ್ಲಿ, justice ಇದೆ ಎಂದು ನನಗನಿಸುತ್ತಿಲ್ಲ. Natural justice demands ಅವರಿಗೆ ಕಾಲಾವಕಾಶ ಕೊಡಬೇಕು. ಒಂದು ನೋಟಿಸ್ ಕೊಟ್ಟಿದ್ದಾರೆ. ಅದಕ್ಕೆ ಅವರ ಉತ್ತರವನ್ನು hear ಮಾಡಬೇಕಲ್ಲವೇ? ಅವರು ಉತ್ತರಿಸಲು ನಮಗೆ ಇನ್ನೊಂದು ಸ್ವಲ್ಪ ಟೈಮ್ ಕೊಡಿ ಎಂದು ಕೇಳಿದ್ದಾರೆ. ಅದನ್ನು ಕೊಡಬೇಕಲ್ಲವೇ? ಟೈಮ್ ಕೊಟ್ಟು, ಅವರು ಸರ್ಕಾರದ ನೋಟಿಸ್‌ಗೆ ಉತ್ತರ ಕೊಟ್ಟಮೇಲೆ, ನೀವು ಅದರ ಮೇಲೆ ಯಾವ decison ಬೇಕಾದರೂ ತೆಗೆದುಕೊಳ್ಳಿ. You take any decision afterwards. But, without giving any opporunity to tell their grievances ಹಾಗೆಯೇ order pass ಮಾಡಿದರೆ ಹೇಗೆ? 'ಚುನಾವಣೆ ಇದೆ, ಚುನಾವಣೆಯಲ್ಲಿ ಅವರು ಗೆದ್ದು ಬಿಡುತ್ತಾರೆ, ಇವರು ಗೆಲ್ಲವುದಿಲ್ಲ' ಎಂಬ ಕಾರಣ ಇಟ್ಟುಕೊಂಡು ಸೂಪರ್‌ಸೀಡ್ ಮಾಡಿದ್ದಾರೆ. It looks like it is not done with bona fide intentions.

ಶ್ರೀ ಬಸವರಾಜ ಎಸ್.ಬೊಮ್ಮಾಯಿ :– ಸಾರ್, ಅವರಿಗೆ ನೋಟಿಸ್ ಕೊಟ್ಟಿದ್ದಾರೆ. ರೆಕಾರ್ಡ್‌ಗೆ ತಪ್ಪು ಮಾಹಿತಿ ಹೋಗುವುದು ಬೇಡ. An opportunity was given to them.

ಶ್ರೀ ಸಿದ್ದರಾಮಯ್ಯ :– ನಾನು sufficient time has not been given ಎಂದು ಹೇಳುತ್ತಿದ್ದೇನೆ.

ಶ್ರೀ ಬಸವರಾಜ್ ಎಸ್.ಬೊಮ್ಮಾಯಿ :– ರೆಕಾರ್ಡ್ಸ್ ಸರಿಯಾಗಲಿ. Notice was issued. Opportunity was given.

ಶ್ರೀ ಸಿದ್ದರಾಮಯ್ಯ :– No,no It is not Correct, notice ಕೊಟ್ಟಿದ್ದಾರೆ. sufficient time was not given. At least required time and reasonable time has not been given. Reasonable time ಕೊಟ್ಟು you take any decision in accordance with the provisions for the law. Without giving an opportunity for them ಕ್ರಮ ತೆಗೆದುಕೊಂಡರೆ ಹೇಗೆ? 9ನೇ ತಾರೀಖು last date, 10ನೇ ತಾರೀಖು ಚುನಾವಣೆ ಇದೆ. ಹೀಗಿರುವಾಗ ನೀವು ಚುನಾವಣೆ ಮಾಡಬೇಡಿ, ನಿಮ್ಮನ್ನು ಸೂಪರ್‌ಸೀಡ್ ಮಾಡಿದ್ದೇವೆ ಎಂದು ಹೇಳುವುದು ಸರಿಯಲ್ಲ. I don't think there is any justice in that. ಇದನ್ನು bona fide intention ನಿಂದ ಮಾಡಿದ್ದೀರಿ ಎಂದು ಯಾರಿಗೂ ಕೂಡ ಅನಿಸುವುದಿಲ್ಲ. I request the concerned Minister, please set aside the supersede order. ನೀವು ಅವರನ್ನು hear ಮಾಡಿ, you take any decision afterwards.

ಶ್ರೀ ಲಕ್ಷ್ಮಣ ಸಂಗಪ್ಪ ಸವದಿ :– ಮಾನ್ಯ ಅಧ್ಯಕ್ಷರೆ, ಈಗಾಗಲೇ ನಾವು ನಮ್ಮ ಉತ್ತರದಲ್ಲಿ ಹೇಳಿದ್ದೇವೆ. ನೀವು ಮೇಲ್ಮನವಿ ಸಲ್ಲಿಸಬಹುದು. ಇದರಲ್ಲಿ ಏನಾದರೂ ತಪ್ಪಾಗಿದೆ ಎಂದು ನಿಮಗನಿಸಿದ್ದರೆ ಅಥವಾ ಅನ್ಯಾಯವಾಗಿದೆ ಎನಿಸಿದ್ದರೆ ನೀವು ನ್ಯಾಯ ಪಡೆದುಕೊಳ್ಳಲಿಕ್ಕೆ ಅವಕಾಶವಿದೆ ಎಂದು ಸರ್ಕಾರದ ಉತ್ತರದಲ್ಲೇ ಹೇಳಿದ್ದೇವೆ.

[ಗೊಂದಲ]

ಅಧ್ಯಕ್ಷರು :– ಸರ್ಕಾರದವರು ಉತ್ತರ ಕೊಟ್ಟಿದ್ದಾರೆ. ಅವರ stand ಏನೆಂಬುದನ್ನು ಹೇಳಿದ್ದಾರೆ. ನಿಮ್ಮ stand ಅನ್ನು ನೀವು ಹೇಳಿದ್ದೀರಿ. ದಯವಿಟ್ಟು ಇದನ್ನು ಇಲ್ಲಿಗೇ close ಮಾಡೋಣ. ನಾನು ಈಗಾಗಲೇ ಹೇಳಿದ್ದೇನೆ. ಈ subject ಅನ್ನು close ಮಾಡಿದ್ದೇನೆ, ಇದರ ಚರ್ಚೆಯನ್ನು ಮುಕ್ತಾಯಗೊಳಿಸಿದ್ದೇನೆ. ದಯವಿಟ್ಟು ನೀವು ನಿಮ್ಮ ಸ್ಥಾನಗಳಿಗೆ ಹೋಗಿ. ಮುಂದಿನ proceedings ಅನ್ನು ನಡೆಸಲಿಕ್ಕೆ ಅನುವು ಮಾಡಿಕೊಡಬೇಕು, ಸಹಕಾರ ಕೊಡಬೇಕೆಂದು ನಾನು ಗೌರವಾನ್ವಿತ ಸದಸ್ಯರಲ್ಲಿ ವಿನಂತಿ ಮಾಡುತ್ತಿದ್ದೇನೆ.

[ಗೊಂದಲ]

ಶ್ರೀ ಹೆಚ್.ಸಿ.ಬಾಲಕೃಷ್ಣ :– ಮಾನ್ಯ ಅಧ್ಯಕ್ಷರೆ, ನಮಗೆ ಅನ್ಯಾಯವಾಗಿದೆ. ಈ ವಿಚಾರದಲ್ಲಿ ನೀವು ನಮಗೆ ನ್ಯಾಯ ದೊರಕಿಸಿಕೊಡಬೇಕು.

[ಗೊಂದಲ]

ಅಧ್ಯಕ್ಷರು :– Everyday ಒಂದಲ್ಲ ಒಂದು subject ತೆಗೆದುಕೊಂಡು ಬಂದು ವೆಲ್‌ಗೆ ಬರುವುದು ಸರಿಯಲ್ಲ. ನೀವು ಏನು ಹೇಳಬೇಕೋ ಅದನ್ನು ಹೇಳಿದ್ದೀರಿ ಸರ್ಕಾರದವರು ಏನನ್ನು ಹೇಳಬೇಕಿತ್ತೋ, ಅದನ್ನು ಹೇಳಿದ್ದಾರೆ. ಸರ್ಕಾರದ ವಿರುದ್ಧ ಮಾಡಬೇಕಾಗಿದ್ದ ಅಪಾದನೆಗಳನ್ನೂ ಸಹ ನೀವು ಮಾಡಿದ್ದೀರಿ. ಇಷ್ಟೆಲ್ಲಾ ಆದ ಮೇಲೂ, ಇದು ಇದೇ ರೀತಿ ಆಗಬೇಕು ಎಂದು ನಾವು insist ಮಾಡಲಿಕ್ಕೆ ಬರುವುದಿಲ್ಲ.

[ಗೊಂದಲ]

ಶ್ರೀ ಹೆಚ್.ಸಿ.ಬಾಲಕೃಷ್ಣ :– ಮಾನ್ಯ ಅಧ್ಯಕ್ಷರೆ, ನಮಗೆ ನ್ಯಾಯ ಬೇಕು.

[ಗೊಂದಲ]

ಅಧ್ಯಕ್ಷರು :– ಅದಕ್ಕಾಗಿ ನಿಮಗೆ ಬೇರೆ ಬೇರೆ ದಾರಿಗಳಿವೆ.

[ಗೊಂದಲ]

ಶ್ರೀ ಹೆಚ್.ಸಿ.ಬಾಲಕೃಷ್ಣ :– ಆಗಿರುವ ತಪ್ಪನ್ನು ಸರ್ಕಾರ ಸರಿ ಮಾಡಬೇಕಲ್ಲವೇ? ನಾವಾಗಿ ನಾವು ಮಾಡಿಲ್ಲ. ಅವರಿಂದ ಉದ್ಭವವಾಗಿರುವುದು. ಸೂಪರ್‌ಸೀಡ್ ಮಾಡಿದ್ದು ಅವರು.

ಅಧ್ಯಕ್ಷರು :– ದಯವಿಟ್ಟು, ತಮ್ಮ ಸ್ಥಳಕ್ಕೆ ಹೋಗಿ, ಉಳಿದ ಸಮಯವೆಲ್ಲಾ ಇದರಲ್ಲೇ ಹೋಗುತ್ತದೆ.

ಶ್ರೀ ಹೆಚ್.ಸಿ.ಬಾಲಕೃಷ್ಣ :– ದಯಮಾಡಿ, ಸರ್ಕಾರಕ್ಕೆ ಮರ್ಯಾದೆ ತರುವಂಥ ಉತ್ತರ ಬೇಕು. ಈಗ ವಿರೋಧಪಕ್ಷದ ನಾಯಕರು, set aside ಮಾಡಿ ಹಿಯರಿಂಗ್ ಮಾಡಿ, ಟೈಂ ಕೊಡಿ, ಅವಕಾಶ ಕೊಡಿ ಎಂದು ಹೇಳಿದ್ದಾರೆ.

ಅಧ್ಯಕ್ಷರು :– ಒಂದು ವಿಷಯಕ್ಕೆ ಸಂಬಂಧಿಸಿದಂತೆ ಈ ರೀತಿ ಸದನವನ್ನು stall ಮಾಡುವುದು ಸರಿಯಲ್ಲ, ಸಾರ್ವಜನಿಕರು ನೋಡುತ್ತಿದ್ದಾರೆ ಚರ್ಚೆ ಮಾಡುವ ಬೇರೆ ಬೇರೆ ಮಹತ್ವದ ವಿಷಯಗಳಿದ್ದಾವೆ. ಆ ಬಗ್ಗೆ ಏನು ಕಾನೂನು ರೀತ್ಯಾ ಕ್ರಮ ತೆಗೆದುಕೊಳ್ಳಬೇಕೋ ಕೈಗೊಳ್ಳಿ, ಎಲ್ಲವೂ ಇಲ್ಲೇ ಆಗಬೇಕು, ಇಲ್ಲೇ ನಿರ್ಣಯವಾಗಬೇಕೆಂದರೆ ಆಗುವುದಿಲ್ಲ. ಬೇರೆ remedies ಇದ್ದಾವೆ. ಆ remedyಯನ್ನು ಉಪಯೋಗ ಮಾಡಿ ಇದು ಇಲ್ಲಿಗೆ ಮುಗಿಯಲಿಲ್ಲ. ಇವತ್ತೇನು ಅನ್ಯಾಯವಾಗಿದೆ ಎಂದು ಹೇಳುತ್ತಿದ್ದೀರಿ, ಅನ್ಯಾಯಕ್ಕೆ ಕೊನೆ ಎಲ್ಲಿದೆ? ಮೇಲೆ Appellate powers ಇರುತ್ತವೆ. ಕೋರ್ಟು ಕಛೇರಿಗಳಿದ್ದಾವೆ, ಎಲ್ಲವನ್ನು ಇಲ್ಲೇ ಸರಿಪಡಿಸಬೇಕು, ವೆಲ್‌ನಲ್ಲೇ ಬಂದು ಸರಿಪಡಿಸಬೇಕು ಎಂದರೆ ಆಗುವುದಿಲ್ಲ,

ದಯವಿಟ್ಟು ನಿಮ್ಮ ಸ್ಥಾನಕ್ಕೆ ಹೋಗಿ. ನೋಡಿ ನಾನು ರಿಕ್ವೆಸ್ಟ್ ಮಾಡಿಕೊಳ್ಳುತ್ತೇನೆ, ಮತ್ತೆ ನಾನು ಸದನವನ್ನು ಮುಂದೂಡಬೇಕಾಗುತ್ತದೆ. ಸದನವನ್ನು ಮುಂದೂಡುವುದರಿಂದ ಇವತ್ತು ಸಾರ್ವಜನಿಕ ಮಹತ್ವವುಳ್ಳ ವಿಷಯದ ಬಗ್ಗೆ ಚರ್ಚೆ ಮಾಡುವುದಕ್ಕೆ ತೊಂದರೆಯಾಗುತ್ತದೆ. ಬೇರೆ ಬೇರೆ ವಿಷಯಗಳಿದ್ದಾವೆ debate ನಲ್ಲಿ ಭಾಗವಹಿಸಿ, ಇದೇ ವಿಷಯ ಉಪಯೋಗವಾಗುತ್ತದೆನ್ನುವುದಾದರೆ, ಬೇರೆ ವಿಷಯ ಬೇಕಾಗಿಲ್ಲವೆನ್ನುದಾದರೆ ಬಿಡಿ, ಇದೇ ಒಂದು ವಿಷಯ ಅಂತಿಮವಾಗಿ ನಡೆಸಿಕೊಂಡು ಹೋಗುವುದಾದರೆ ಕುಳಿತುಕೊಳ್ಳಿ, ನಾನು adjourn ಮಾಡಿ ಹೊಗುತ್ತೇನೆ, ಇದು ಒಳ್ಳೆಯದಲ್ಲ.

ಶ್ರೀ ಸಿದ್ದುಸವದಿ :– ಅದರಲ್ಲಿ ಜೀವನೇ ಇಲ್ಲ, ಇಲ್ಲಿ ಕೊಲೆ ಮಾಡುವ ಪ್ರಸಂಗವೇಕೆ ಬರುತ್ತದೆ, ಆ ಇಲಾಖೆಯವರೆ ಕೊಲೆ ಮಾಡಿಬಿಟ್ಟಿದ್ದಾರೆ.

[ಗೊಂದಲ]

ಶ್ರೀ ಎಸ್.ಸುರೇಶ್ ಕುಮಾರ್ :– ಇನ್ನೊಂದು ಬಹಳ ಮುಖ್ಯವಾದ ಅಂಶವೇನೆಂದರೆ, ಈಗಾಗಲೇ ಈ ವಿಚಾರ ರಾಜ್ಯ ಉಚ್ಚ ನ್ಯಾಯಾಲಯದಲ್ಲಿದೆ. ಅಲ್ಲಿ ಇದು ಇರುವುದರಿಂದ, it is sub-judice. ದಯವಿಟ್ಟು ಚರ್ಚೆಗೆ ಅವಕಾಶವಿಲ್ಲ, ವಾಪಸ್ ಹೋಗಿ. ಹೈಕೋರ್ಟಿನ ಮುಂದೆ ಇಲ್ಲವೇ?

ಶ್ರೀ ಹೆಚ್.ಸಿ.ಬಾಲಕೃಷ್ಣ :– ಈಗ ಹೈ ಕೋರ್ಟಿನ ಮುಂದೆ ಇದೆ ಎಂದು ನಾವು ನ್ಯಾಯ ಕೇಳಬಾರದೇ? ಹೈ ಕೋರ್ಟಿನ ಮುಂದೆ ಇದೆ ಎಂದು ನ್ಯಾಯ ಕೇಳುವ ಅಧಿಕಾರವಿಲ್ಲವೇ? ಹೈ ಕೋರ್ಟಿನಲ್ಲಿ ತೀರ್ಮಾನವಾಗಬಹುದು, ನೀವು ಸರ್ಕಾರದಲ್ಲಿ ತೀರ್ಮಾನ ಮಾಡಬೇಕಲ್ಲಾ?

ಶ್ರೀ ಎಸ್.ಸುರೇಶ್ ಕುಮಾರ್ :– ಸಾಕಷ್ಟು ಅವಕಾಶವನ್ನು ಕೊಡಲಾಗಿದೆ, ದಯಮಾಡಿ ವಾಪಸ್ ಹೋಗಿ.

ಅಧ್ಯಕ್ಷರು :– ಸಾಕಷ್ಟು ಅವಕಾಶಗಳನ್ನು ಕೊಟ್ಟಿದ್ದೇನೆ, ದಯಮಾಡಿ ತಮ್ಮ ಸ್ಥಾನಕ್ಕೆ ಹೋಗಿ. ಮಾನ್ಯ ವಿರೋಧಪಕ್ಷದ ನಾಯಕರು, ಈಗ ಇವರು ವೆಲ್ ಒಳಗೆ ಬಂದಿದ್ದಾರೆ, ನಾನು ಉಳಿದ ಪ್ರೊಸೀಡಿಂಗ್ಸ್ ನಡೆಸಲು ತಯಾರಿದ್ದೇನೆ. ಇವರು ನಾನು ಎಷ್ಟು ರಿಕ್ವೆಸ್ಟ್ ಮಾಡಿದರೂ ಹೋಗುತ್ತಿಲ್ಲ. ಮತ್ತೆ ಸದನದ ಸಮಯ ಇದೇ ರೀತಿ ವ್ಯರ್ಥವಾಗುತ್ತಿದೆ. ಇದು ಒಳ್ಳೆಯದಲ್ಲ, ತಾವು ರಿಕ್ವೆಸ್ಟ್ ಮಾಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಮತ್ತೆ ಅವರು ಅದನ್ನು ಮೀರಿ ಹೋಗುವುದಿದ್ದರೆ, ತಾವು ಸಹಕಾರ ನೀಡಿದರೆ ನಾನು ಮುಂದಿನ ಪ್ರೊಸೀಡಿಂಗ್ಸ್ ನಡೆಸುವುದಕ್ಕೆ ತಯಾರಿದ್ದೇನೆ. ರೂಲ್ 69 ಮೇಲೆ ಚರ್ಚೆ ಮಾಡುವುದಕ್ಕೆ ನಾನು ತಯಾರಾಗಿದ್ದೇನೆ.

ಶ್ರೀ ಹೆಚ್.ಸಿ.ಬಾಲಕೃಷ್ಣ :- ಅಧ್ಯಕ್ಷರೆ, ನೀವೇ ನಮಗೆ ನ್ಯಾಯ ಒದಗಿಸಿಕೊಡದಿದ್ದರೆ ಮತ್ತೆ ನಾವು ವ್ಯಾಯಕ್ಕಾಗಿ ಎಲ್ಲಿಗೆ ಹೋಗುವುದು?

ಶ್ರೀ ಸಿದ್ದರಾಮಯ್ಯ :- ಮಾನ್ಯ ಅಧ್ಯಕ್ಷರೆ, ಈ ಮನೆ ನಡೆಯಬೇಕೆನ್ನುವ ಕಾರಣಕ್ಕೋಸ್ಕರವೇ ನಮ್ಮೆಲ್ಲರ ಸಂಪೂರ್ಣ ಸಹಕಾರ ವಾಗಬೇಕು. ನೀವು ಹೇಳಿದ ರೀತಿಯಲ್ಲಿ ನಾನೂ ಕೂಡ ನೀವು ತಮ್ಮ ತಮ್ಮ ಸ್ಥಾನಗಳಿಗೆ ಹೋಗಿ ಕುಳಿತುಕೊಳ್ಳಿ ಎಂದು ಅವರಲ್ಲಿ ಮನವಿ ಮಾಡುತ್ತೇನೆ. ನಾನು ಇನ್ನೊಮ್ಮೆ ಸಹಕಾರ ಮಂತ್ರಿಗಳಲ್ಲಿ ಮನವಿ ಮಾಡುತ್ತೇನೆ. ಈಗ ಸದನ ನಡೆಯಬೇಕು ಈ ಸದನ ನಡೆಯುವುದಕ್ಕೆ ನಿಮ್ಮ ಹತ್ತಿರ ಉತ್ತರವಿದೆ. ದಯವಿಟ್ಟು ಸದನ ನಡೆಸತಕ್ಕಂಥ ಕೆಲಸವನ್ನು ಮಾಡಬೇಕು. ಮತ್ತೊಮ್ಮೆ ನಾನು ತಮ್ಮಲ್ಲಿ ಮನವಿ ಮಾಡುವುದೇನೆಂದರೆ, ಇವತ್ತು ಗುಲ್ಬರ್ಗಾ ಮಿಲ್ಕ್ ಯೂನಿಯನ್ ಅನ್ನು ಸೂಪರ್‌ಸೀಡ್ ಮಾಡಿದ್ದೀರಿ, ಚುನಾವಣೆ ನಡೆಯದ ರೀತಿಯಲ್ಲಾಗಿದೆ. ಅವರು ಟೈಮ್ ಕೇಳಿದ್ದಾರೆ ಅಷ್ಟು ಸಮಯವನ್ನು ಪರಿಗಣಿಸಿ, ಆ ಮನವಿಯನ್ನು ಪರಿಗಣಿಸಿ, ಹಿಯರ್ ಮಾಡುವುದಕ್ಕೆ ಒಂದಷ್ಟು ಕಾಲಾವಕಾಶವನ್ನು ಕೊಟ್ಟು, ಯಾವುದೇ ಆದೇಶವನ್ನು set aside ಮಾಡುವುದಕ್ಕೆ ಸಹಕಾರಿ ಕಾನೂನಿನಲ್ಲಿ ಸಹಕಾರ ಮಂತ್ರಿಗಳಿಗೆ ಅವಕಾಶವಿದೆ. ದಯಮಾಡಿ ಅದನ್ನು set aside ಮಾಡಿ, ಏಕೆಂದರೆ prima facie it looks like an illegal order. ಅದು legal order ತರಹ ಅದು ಕಾಣುವುದಿಲ್ಲ. ಇವರೂ ಕೂಡ ಹೋಗಿ ಕುಳಿತುಕೊಂಡು ಸದನ ನಡೆಯುವುದಕ್ಕೂ ಕೂಡ ಅನುಕೂಲವಾಗುತ್ತದೆ. ದಯವಿಟ್ಟು ಆ ರೀತಿಯ ಒಂದು ಉತ್ತರವನ್ನು ಮಂತ್ರಿಗಳು ಕೊಟ್ಟರೆ ಒಳ್ಳೆಯದು, ಅದನ್ನು ಮಾಡಬೇಕು.

ಶ್ರೀ ಲಕ್ಷ್ಮಣ್ ಸಂಗಪ್ಪ ಸವದಿ :- ಇವತ್ತು ಜಂಟಿ ನಿಬಂಧಕರು, ಶಾಸನಬದ್ಧವಾಗಿರುವ ಅಧಿಕಾರವನ್ನು ಚಲಾವಣೆ ಮಾಡಿ supersession ಮಾಡಿರುವುದು. ಈಗ ಆಡಳಿತಾತ್ಮಕವಾದ ನಿರ್ದೇಶನವನ್ನು ಕೊಡುವುದಕ್ಕೆ ನನಗೆ ಬರುವುದಿಲ್ಲ. ಅದಕ್ಕೆ ತಮ್ಮ ಮುಖೇನ ಏನು ವಿನಂತಿ ಮಾಡಿಕೊಳ್ಳುತ್ತೇನೆಂದರೆ, ಅವರು ಇವತ್ತೀನ ಸಂಜೆಯೋಳಗೆ ಮೇಲ್ಮನವಿಯನ್ನು ಸಲ್ಲಿಸಿಕೊಳ್ಳಲಿ, ತಕ್ಷಣ ಅವರಿಗೆ ನ್ಯಾಯ ಒದಗಿಸಿಕೊಡುವ ರೀತಿಯಲ್ಲಿ ಅಧಿಕಾರಿ ತನ್ನ ಜಾವಾಬ್ದಾರಿಯನ್ನು ನಿರ್ವಹಿಸುತ್ತಾರೆ. ಒಂದು ವೇಳೆ ಅವರು ಮಾಡಿರುವುದು ಸರಿಯಿಲ್ಲವೆನ್ನುವುದಾದರೆ, ತಕ್ಷಣ ಅವರಿಗೆ ನ್ಯಾಯ ಸಿಕ್ಕೇಸಿಗುತ್ತದೆ. ಅದಕ್ಕೆ ವಿರೋಧಪಕ್ಷದ ನಾಯಕರಿಗೆ, ಎಲ್ಲಾ ಶಾಸಕರಲ್ಲಿ ನಾನೇನು ವಿನಂತಿ ಮಾಡಿಕೊಳ್ಳುತ್ತೇನೆಂದರೆ, ತಾವೆಲ್ಲರೂ ಕೂಡ ನ್ಯಾಯಪಡೆದುಕೊಳ್ಳುವುದಕ್ಕೆ ಮೇಲ್ಮನವಿಯನ್ನು ಸಲ್ಲಿಸಿ, ಇವತ್ತು ಸದನ

ನಡೆಯುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು ನಾನು ವಿನಂತಿ ಮಾಡಿಕೊಳ್ಳುತ್ತೇನೆ.

ಅಧ್ಯಕ್ಷರು :– ವೆಲ್‌ನಲ್ಲಿರುವ ಸದಸ್ಯರು ದಯವಿಟ್ಟು ತಮ್ಮ ಸ್ಥಾನಕ್ಕೆ ಹೋಗಿ.

ಶ್ರೀ ಹೆಚ್.ಸಿ.ಬಾಲಕೃಷ್ಣ :– ಸಭಾನಾಯಕರು ಸುಮ್ಮನೆ ಕುಳಿತಿರುವುದನ್ನು ನೋಡಿದರೆ, ಇದರಲ್ಲಿ ಏನೋ ಅಡಗಿರುವುದು ಹೊರನೋಟಕ್ಕೆ ವ್ಯಕ್ತವಾಗುತ್ತಿದೆ. ಈ ವಿಚಾರದಲ್ಲಿ ಸಭಾನಾಯಕರು ಉತ್ತರವನ್ನು ಕೊಡಬಹುದಾಗಿತ್ತು. ವಿರೋಧಪಕ್ಷದವರಿಗೆ ನ್ಯಾಯ ದೊರಕಿಸಿಕೊಡುವುದಕ್ಕೆ ಸಭಾನಾಯಕರು ಮಧ್ಯಪ್ರವೇಶ ಮಾಡಬಹುದಾಗಿತ್ತು. ಅವರಿಂದ ಸರಿಯಾದ ಉತ್ತರವನ್ನು ನಾವು ಅಪೇಕ್ಷೆಪಟ್ಟಿದ್ದೆವು. ಅವರು ನಮ್ಮ ನಿರೀಕ್ಷೆಯ ರೀತಿಯಲ್ಲಿ ಅವರು ಉತ್ತರವನ್ನು ಕೊಡಲಿಲ್ಲ. ಉದ್ದೇಶಪೂರ್ವಕವಾಗಿ ಮಾಡಿರುವುದೆಂಬುದನ್ನು ಅವರು ಈಗ ಒಪ್ಪಿಕೊಂಡಿದ್ದಾರೆ. ಮೇಲ್ಮನವಿಗೆ ನ್ಯಾಯವನ್ನು ಚುನಾವಣೆಯಾದ ಮೇಲೆ ಕೊಡುತ್ತೀರಾ ಸ್ವಾಮಿ? ಕೆಎಂಎಫ್ ಚುನಾವಣೆಯಾದ ಮೇಲೆ ನಿಮಗೆ ಮೇಲ್ಮನವಿಯನ್ನು ತೆಗೆದುಕೊಂಡು ಪರಿಶೀಲನೆ ಮಾಡಿ ಕೊಡುತ್ತೀರಾ? ಚುನಾವಣೆ ದೃಷ್ಟಿಯಿಂದ ಮಾಡುತ್ತಾರೆಂಬುದನ್ನು ಈಗಾಗಲೇ ವಿರೋಧಪಕ್ಷದ ನಾಯಕರು ಹೇಳಿದ್ದಾರೆ. ನೀವು ಅವರ ಸಲಹೆಯನ್ನು ಕೂಡ ಒಪ್ಪಿಕೊಳ್ಳುವುದಕ್ಕೆ ತಯಾರಿಲ್ಲ. ಆದುದರಿಂದ, ನಾವು ಈ ನಿಲುವನ್ನು ಖಂಡಿಸಿ ವಾಕ್ ಔಟ್ ಮಾಡುತ್ತಿದ್ದೇವೆ.

[ಈ ಸಂದರ್ಭದಲ್ಲಿ ಜೆಡಿಎಸ್‌ನ ಸದಸ್ಯರುಗಳು ಸಭಾ ತ್ಯಾಗ ಮಾಡಿದರು.]

ಅಧ್ಯಕ್ಷರು:– ಈಗ ನಿಯಮ 69ರ ಮೇರೆಗೆ ಸಾರ್ವಜನಿಕ ಮಹತ್ವದ ಜರೂರು ವಿಷಯದ ಬಗ್ಗೆ ಮಾನ್ಯ ವಿರೋಧಪಕ್ಷದ ನಾಯಕರಾದ ಸಿದ್ದರಾಮಯ್ಯನವರು ಚರ್ಚೆ ಆರಂಭಿಸುವರು.

ಶ್ರೀ ಸಿದ್ದರಾಮಯ್ಯ :– ಸೋಮವಾರ ಪ್ರಶ್ನೋತ್ತರವೇಳೆಯಾದ ಮೇಲೆ ತೆಗೆದುಕೊಳ್ಳಿ, ಸುರೇಶ್ ಕುಮಾರ್, ನಿನ್ನೆ ತಾವು ಹೇಳಿದಿರೆಂದು ಒಪ್ಪಿಕೊಂಡೆ.

ಶ್ರೀ ಎಸ್.ಸುರೇಶ್ ಕುಮಾರ್ :– ಬಹಳ ಧನ್ಯವಾದಗಳು.

ಅಧ್ಯಕ್ಷರು :– ಆಯಿತು, ಈಗ ವಿತ್ತೀಯ ಕಾರ್ಯಕಲಾಪ.

4.ವಿತ್ತೀಯ ಕಾರ್ಯಕಲಾಪ